ವಿಜಯಪುರ | ಸಂಪುಟ 04 | ಸಂಚಿಕೆ 220 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಅಕ್ಟೋಬರ್ 25, 2026



"ರಾಜ್ಯದಲ್ಲಿ ಬರದ ಪರಿಸ್ಥಿತಿ ಎದುರಾಗಿದ್ದು, ಜಲಾಶಯಗಳಲ್ಲಿ ನೀರಿನ ಮಟ್ಟ ಕುಸಿಯುತ್ತಿದೆ. ಇಂತಹ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸುವ ಮೂಲಕ ರಾಜ್ಯ ಸರ್ಕಾರ ಕನ್ನಡಿಗರು ಮತ್ತು ರೈತರ ಹಿತಾಸಕ್ತಿಯನ್ನು ಬಲಿ ಕೊಡುತ್ತಿದೆ. ಈ ಪರಿಸ್ಥಿತಿ ನಿರ್ಮಾಣವಾಗಿರುವುದಕ್ಕೆ ಸರ್ಕಾರದ ವೈಫಲ್ಯವೇ ಕಾರಣ."

■ ಆರ್. ಅಶೋಕ್
ವಿಧಾನಸಭೆ ವಿರೋಧ ಪಕ್ಷದ ನಾಯಕರು

## ವಿಜಯಪುರ ಜಿಲ್ಲೆ 371(ಜೆ) ಗೆ ಸೇರ್ಪಡೆಗೆ ವಿದ್ಯಾರ್ಥಿಗಳ ಆಗ್ರಹ




■ ಉದಯರಶ್ಮಿ ದಿನಪತ್ರಿಕೆ

**ಸಿಂದಗಿಯಲ್ಲಿ ಕಳೆದ 23 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹ**

ಸಿಂದಗಿ: ವಿಜಯಪುರ ಜಿಲ್ಲೆಯು ಭೌಗೋಳಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು 371(ಜೆ) ಕಲಂ ವ್ಯಾಪ್ತಿಗೆ ಸೇರಿಸಿ ಈ ಪ್ರದೇಶವನ್ನು ಅಭಿವೃದ್ಧಿಗಾಗಿ ಜಿಲ್ಲೆಯ ಜನಪ್ರತಿನಿಧಿಗಳು ಕಲ್ಯಾಣ ಕರ್ನಾಟಕದ 371ಜೆ ವಿಶೇಷ ಸ್ಥಾನಮಾನಕ್ಕೆ ವಿಜಯಪುರ ಜಿಲ್ಲೆಯನ್ನು ಪರಿಗಣಿಸಲು ಸರಕಾರಕ್ಕೆ ಒಗ್ಗಟ್ಟಿನಿಂದ ಹಕ್ಕೋತ್ತಾಯ ಮಂಡಿಸಿ ಈ ಭಾಗದ ಜನರಿಗೆ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಸಿಂದಗಿಯ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿ ಸಾಕ್ಷಿ ಬಿರಾದಾರ ಆಗ್ರಹಿಸಿದರು.

ನಗರದ ಬಸವೇಶ್ವರ ಸರ್ಕಲ್ ಹತ್ತಿರ, ಗೋಕಾಕ ಚಳವಳಿಯ ರೂವಾರಿ ಶ್ರೀ ರೇ.ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ ಕಳೆದ 23 ದಿನಗಳಿಂದ ನಡೆದ ಧರಣಿಯಲ್ಲಿ ಭಾಗವಹಿಸಿ ಮಾತನಾಡಿ, ಈ ಭಾಗದ ಜನರಿಗೆ ಶಿಕ್ಷಣ, ಉದ್ಯೋಗ, ನೀರಾವರಿ ಸೌಲಭ್ಯದಲ್ಲಿ ರೈತರ ಹಿತಕಾಯಬೇಕು ಎಂದರು

ನಗರದ ಪ್ರೇರಣಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಅಧ್ಯಕ್ಷ ಆರ್ ಡಿ ಕುಲಕರ್ಣಿ ಮಾತನಾಡಿ, ಕಲ್ಯಾಣ ಕರ್ನಾಟಕದ ಜನರ ಆಶೋತ್ತರಗಳು ಈಡೇರಬೇಕಾದರೆ 371(ಜೆ) ಕಲಂ ಅನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಸರ್ಕಾರ ಮಧ್ಯ ಪ್ರವೇಶಿಸಿ ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು. ಅಲ್ಲದೆ ನಮ್ಮ ಭಾಗದ ವಿದ್ಯಾರ್ಥಿಗಳಿಗೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷ ಮೀಸಲಾತಿ ಪಡೆಯಲು ವಿಜಯಪುರ ಜಿಲ್ಲೆಗೆ 371 ಜೆ ಕಲಂ ಮಿಸಲಾತಿ ಪಡೆಯಲು ನಾವು ಸಿದ್ದರಾಗಬೇಕು ಎಂದು ಕರೆ ನೀಡಿದರು

ಈ ಸಂದರ್ಭದಲ್ಲಿ ಮೇಘಾ ಚೌದರಿ, ಸಾವಿತ್ರಿ ಯಂಕಂಚಿ, ಸಾನಿಕಾ ನಂದರಗಿ , ಶಿವಾನಿ ಬಿರಾದಾರ, ಚನ್ನಮ್ಮ ಯಾಳಗಿ, ಕವಿತಾ ಕೆಂಭಾವಿ, ರೂಪಾ ಪೂಜಾರಿ, ಹೋರಾಟದ ರೂವಾರಿ ರಂಗನಾಥ ತೊರ್ಪೆ, ಗುರುರಾಜ್ ಪಡಶೆಟ್ಟಿ, ಶಂಭುಲಿಂಗ ಕಕ್ಕಳಮೇಲಿ, ಸಾಯಬಣ್ಣ ದೇವರಮನಿ, ಪಂಡಿತ ಯಂಪುರೆ, ದಾನಪ್ಪಗೌಡ ಚನಗೊಂಡ, ಎಂ. ಎಂ. ಹಂಗರಗಿ, ಸಂಗಪ್ಪ ಬ್ಯಾಕೋಡ, ಉಪನ್ಯಾಸಕ ಸಾಹೇಬಗೌಡ ದುದಗಿ ಹೋರಾಟ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಅಶೋಕ ವಾರದ, ಶಂಕರ ಮಲ್ಲೇದ, ಶ್ರೀಮಂತ ಪಾಟೀಲ, ಈರಣ್ಣಗೌಡ ಪಾಟೀಲ್ ಅಸಂಗಿಹಾಳ, ಅಪ್ಪುಗೌಡ ಪಾಟೀಲ್, ಪರಶುರಾಮ ನಾಯ್ಕೋಡಿ ಖಾನಾಪುರ, ಶ್ರೀಶೈಲ ಯಳಮೇಲಿ, ಶ್ರೀಮತಿ ಎಂ ಪಿ ಬುಕ್ಕ, ನಿವೇದಿತ ಉಮರಗಿ, ಶ್ರೀಮತಿ ವ್ಹಿ ಎಸ್ ಆಲಳಿಮಠ, ರೂಪಾ ಶಿವಸಿಂಪಗೇರ, ಸತೀಶ ಕುಲಕರ್ಣಿ, ಬಸವರಾಜ ದೇಸಾಯಿ, ಶಾಂತು ರಾಣಗೋಳ, ಪಿ ಕೆ ಪೂಜಾರಿ ಅಜುಂ ಆಲಮೇಲ, ಎಸ್ ಎಂ ವೀರಾಪೂರ, ಎ ವ್ಹಿ ನಾಯಕ್, ಶಿಲ್ಪಾ ಪಾಟೀಲ, ಪ್ರೇರಣ ಸಂಸ್ಥೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಹಲವರು ಇದ್ದರು.

## ಸಿದ್ದೇಶ್ವರ ಶ್ರೀ ಮಹಾನ್ ದಾರ್ಶನಿಕರು ಎಂಎಲ್ಸಿ ಸುನೀಲಗೌಡ



■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಮ್ಮ ಪ್ರವಚನಗಳ ಮೂಲಕ ಜನಮಾನಸದಲ್ಲಿ ಜ್ಞಾನದ ಬೀಜ ಬಿತ್ತಿದ ಸಿದ್ದೇಶ್ವರ ಸ್ವಾಮೀಜಿಗಳು ಮಹಾನ್ ದಾರ್ಶನಿಕರು. ತಮ್ಮ ಸರಳ ಜೀವನ, ನಡೆ-ನುಡಿ ಹಾಗೂ ತತ್ವಬೋಧನೆಗಳ ಮೂಲಕ ಸಮಾಜಕ್ಕೆ ಬದುಕಿನ ಮೌಲ್ಯಗಳನ್ನು ಕಲಿಸಿಕೊಟ್ಟ ಅವರು, ತಮ್ಮ ಜೀವನದ ಆದರ್ಶಗಳ ಮೂಲಕ ಇತರರ ಬದುಕಿಗೆ ದಾರಿದೀಪವಾದ ಮಹಾನ್ ಸತ್ಪುರುಷರು ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಹೇಳಿದರು.

ಪಟ್ಟಣದ ಬಸ್ ನಿಲ್ದಾಣದ ಎದುರು ನೂತನವಾಗಿ ನಿರ್ಮಿಸಲಾದ ಗಾಣಸಿರಿ ವೃತ್ತವನ್ನು ಶನಿವಾರ ಉದ್ಘಾಟಿಸಿ, ಸಿದ್ದೇಶ್ವರ ಸ್ವಾಮೀ-ಜಿಗಳ ಜನ್ಮದಿನಾಚರಣೆ ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಿದ್ದೇಶ್ವರ ಶ್ರೀಗಳು ವಿಜಯಪುರ ಜಿಲ್ಲೆಯ ನೀರಾವರಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆ ಜನಪ್ರತಿನಿಧಿಗಳಿಗೆ ಸದಾ ನೆನಪಿಸುತ್ತಿದ್ದರು. ಅವರ ಆಶಯದಂತೆ ಸಚಿವ ಎಂ.ಬಿ. ಪಾಟೀಲರು ಸಮಗ್ರ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿ, ಸಾವಿರಾರು ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಿದ್ದಾರೆ ಎಂದು ಹೇಳಿದರು.

ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಮಾತನಾಡಿ, ಸಿದ್ದೇಶ್ವರ ಸ್ವಾಮೀಜಿಗಳು ಸರಳ ವ್ಯಕ್ತಿತ್ವದೊಂದಿಗೆ ಸಾಮಾನ್ಯ ಜೀವನ ನಡೆಸುತ್ತ, ಆಧ್ಯಾತ್ಮಿಕ ಬೋಧನೆಗಳ ಮೂಲಕ ಜನರ ಬದುಕನ್ನು ಉನ್ನತೀಕರಿಸಿದ ಮಹಾನ್ ಸಂತರು ಎಂದರು.

ಗಾಣಿಗ ಸಮಾಜದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಮಾತನಾಡಿ, ಜೀವನದ ಸಾರವನ್ನು ಅತ್ಯಂತ ಸರಳವಾಗಿ ಬೋಧಿಸಿ, ಜನಸಾಮಾನ್ಯರಿಗೆ ಜ್ಞಾನದ ಬೆಳಕು ನೀಡಿದ ಸಿದ್ದೇಶ್ವರ ಶ್ರೀಗಳ ಚಿಂತನೆಗಳನ್ನು ಸದಾ ಸ್ಮರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನಕನಾಳ ಶಾಖಾ ಮಠದ ಗಿರಿಜಾನಂದ ಸ್ವಾಮೀಜಿ, ಚಿಕ್ಕಲಗುಂ-ಟಿಯ ಶರಣಾನಂದ ಸ್ವಾಮೀಜಿ ಹಾಗೂ ಕನ್ನೇರಿಯ ಚಿದಾನಂದ ದೇವರು ಆಶೀರ್ವಚನ ನೀಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಮಲ್ಲಿಕಾರ್ಜುನ ಧೋತ್ರೆ, ಉಪಾಧ್ಯಕ್ಷ ಇಲಾಯಿ ನದಾಫ್, ಚಡಚಣ ಮಂಡಲ ಬಿಜೆಪಿ ಅಧ್ಯಕ್ಷ ಕಾಂತುಗೌಡ ಪಾಟೀಲ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಭೀಮಾಶಂಕರ ಬಿರಾದಾರ, ಮುಖಂಡರಾದ ಸಂಜೀವ ಐಹೊಳ್ಳಿ, ಅಭಿನವ ಚವ್ಹಾಣ, ಬಾಬುಗೌಡ ಪಾಟೀಲ, ಸಾಹೇಬಗೌಡ ಬಿರಾದಾರ, ಬಸುಗೌಡ ಬಿರಾದಾರ, ಶ್ರೀಶೈಲ ಅಂಜುಟಗಿ, ರವಿ ಉಮರಾಣಿ, ಶಿವಾನಂದ ಪಾಂಡ್ರೆ, ಶ್ರೀಮಂತ ಉಮರಾಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಗಾಣಿಗ ಸಮಾಜದ ತಾಲೂಕು ಅಧ್ಯಕ್ಷ ರಾಜುಸಾಹುಕಾರ ಬಗಲಿ, ಕಾರ್ಯಾಧ್ಯಕ್ಷ ರಮೇಶ ಜಿತ್ತಿ, ಕಾರ್ಯದರ್ಶಿ ಸಿದ್ದು ತೇಲಿ, ಖಜಾಂಚಿ ಗುರುರಾಜ ಸಜ್ಜನ ಹಾಗೂ ಯುವ ಮೋರ್ಚಾ ಅಧ್ಯಕ್ಷ ನಂದು ಗಡಗೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಭಾಗವಹಿಸಿದ್ದರು.

ಶಿಕ್ಷಕ ರಮೇಶ ಮಲ್ಲಾಡಿ ಕಾರ್ಯಕ್ರಮ ನಿರೂಪಿಸಿದರು.

# ಮೂರು ಪ್ರಮುಖ ಬೇಡಿಕೆಗಳಿಗೆ ರೈತರ ಬಿಗಿ ಪಟ್ಟು

### ಕಬ್ಬು ಬೆಂಬಲ ಬೆಲೆಗೆ ಆಗ್ರಹಿಸಿ ನಡೆಯುತ್ತಿರುವ ರೈತರ ಹೋರಾಟ । ಸಿಎಂ ಸಭೆಗೂ ಮುನ್ನ ಬೇಡಿಕೆ ಈಡೇರಿಕೆಗೆ ಆಗ್ರಹ । ನ್ಯಾಯ ಸಿಗದಿದ್ದರೆ ಅ.27ಕ್ಕೆ ಕರ್ನಾಟಕ ಬಂದ್ ಎಚ್ಚರಿಕೆ!



ಬೆಳಗಾವಿ: ಕಬ್ಬು ಬೆಂಬಲ ಬೆಲೆಗೆ ಆಗ್ರಹಿಸಿ ಹೋರಾಟ ನಡೆಸುತ್ತಿರುವ ಉತ್ತರ ಕರ್ನಾಟಕದ ರೈತರು ಈಗ ರಾಜ್ಯ ಸರ್ಕಾರಕ್ಕೆ ಅಂತಿಮ ಗಡುವು ನೀಡಿದ್ದಾರೆ.

ಅಕ್ಟೋಬರ್ 26 ರಂದು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಉನ್ನತ ಮಟ್ಟದ ಸಭೆಗೂ ಮುನ್ನ ರೈತ ಸಂಘಟನೆಗಳು ಮೂರು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಇವುಗಳು ಈಡೇರದಿದ್ದರೆ ಅಕ್ಟೋಬರ್ 27 ರಂದು ರಾಜ್ಯಾದ್ಯಂತ ಬಂದ್ ಆಚ-ರಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ರೈತ ಸಂಘ ಹಸಿರು ಸೇನೆಯ ಪ್ರಧಾನ ಕಾರ್ಯದರ್ಶಿ ಪ್ರೇಮ್ ಚೌಗಲಾ ಅವರು, ಮುಖ್ಯಮಂತ್ರಿ ಅವರೊಂದಿಗಿನ ಸಭೆಯಲ್ಲಿ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ನಿರೀಕ್ಷೆಯಿದೆ. ಸಭೆಯಲ್ಲಿ ಮೂರು ಪ್ರಮುಖ ಬೇಡಿಕೆಗಳನ್ನು ಮಂಡಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರವು ಪ್ರತಿ ಟನ್ ಕಬ್ಬಿಗೆ ರೂ.1,000 ಬೆಂಬಲ ಬೆಲೆ ನೀಡಬೇಕು, ಸಕ್ಕರೆ ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ ರೂ.4,500 ಪಾವತಿಸಬೇಕು ಹಾಗೂ ಕಬ್ಬಿನ ತೂಕ ಮಾಡುವಾಗ ಕಸ ಅಥವಾ ಕೆಸರು ಇದೆ ಎಂಬ ಕಾರಣ ನೀಡಿ ಹಣ ಕಡಿತಗೊಳಿಸುವ ಅಕ್ರಮ ಪದ್ಧತಿಯನ್ನು ತಡೆಯಬೇಕು ಎಂಬುದು ರೈತರ ಪ್ರಮುಖ ಬೇಡಿಕೆಗಳಾಗಿವೆ ಎಂದು ತಿಳಿಸಿದರು.

ಇದೇ ವೇಳೆ ಈ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಅಕ್ಟೋಬರ್ 27ರಂದು ಕರ್ನಾಟಕ ಬಂದ್ ನಡೆಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ.

ಇದಕ್ಕೂ ಮೊದಲು ಅಕ್ಟೋಬರ್ 17ರಂದು ರಾಜ್ಯದ ಕಬ್ಬು ಬೆಳೆಯುವ ಜಿಲ್ಲೆಗಳ ರೈತರು ತಮ್ಮ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದರು.

ಇದಲ್ಲದೆ, ಕರ್ನಾಟಕಕ್ಕೆ ತೈಲ ಮಾರುಕಟ್ಟೆ ಕಂಪನಿಗಳಿಂದ ಶೇ.100ರಷ್ಟು ಎಥನಾಲ್ ಹಂಚಿಕೆ ಮಾಡಬೇಕು ಎಂಬುದು ಮತ್ತೊಂದು ಬೇಡಿಕೆಯಾಗಿದೆ.

ಕಳೆದ ವರ್ಷ ರಾಜ್ಯಕ್ಕೆ ಶೇ.30ರಿಂದ 40ರಷ್ಟು ಮಾತ್ರ ಹಂಚಿಕೆ ಮಾಡಲಾಗಿತ್ತು. ಇದರಿಂದ ಹಲವು ಎಥನಾಲ್ ಮತ್ತು ಸಕ್ಕರೆ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗದೆ, ಹಣದ ಹರಿವಿನ ಸಮಸ್ಯೆ ಎದುರಿಸಿದ್ದವು.

ಪರಿಣಾಮವಾಗಿ ರೈತರಿಗೆ ಹಣ ಪಾವತಿಸುವುದರ ಮೇಲೂ ಪರಿಣಾಮ ಬೀರಿತ್ತು. ಈ ಬೇಡಿಕೆ ಈಡೇರಿದರೆ ಮೆಕ್ಕೆಜೋಳ ಬೆಳೆಗಾರರಿಗೂ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ದೇಶೀಯ ಬಳಕೆಯ ಸಕ್ಕರೆ ಮತ್ತು ವಾಣಿಜ್ಯ ಬಳಕೆಯ ಸಕ್ಕರೆಗೆ ಪ್ರತ್ಯೇಕ ಬೆಲೆ ನಿಗದಿಪಡಿಸಬೇಕು ಹಾಗೂ ವಾಣಿಜ್ಯ ಸಕ್ಕರೆಗೆ ಹೆಚ್ಚಿನ ಬೆಲೆ ನೀಡಬೇಕು ಎಂಬುದು ರೈತರ ಮೂರನೇ ಬೇಡಿಕೆಯಾಗಿದೆ. ಇದರಿಂದ ಸಕ್ಕರೆ ಕಾರ್ಖಾನೆಗಳು ಮತ್ತು ರೈತರಿಗೆ ಉತ್ತಮ ಆದಾಯ ದೊರೆಯಲಿದೆ ಎಂಬುದು ಅವರ ಅಭಿಪ್ರಾಯವಾಗಿದೆ.

ಇದೇ ವೇಳೆ ರೈತರೊಂದಿಗೆ ಮಾತುಕತೆ ನಡೆಸಿರುವುದಾಗಿ ತಿಳಿಸಿದ ಜಿಲ್ಲಾಧಿಕಾರಿ, ಕೇಂದ್ರ ಸಚಿವರು ಮತ್ತು ಮುಖ್ಯಮಂತ್ರಿಗಳ ಕಚೇರಿಗಳನ್ನೂ ಸಂಪರ್ಕಿಸಲಾಗಿದೆ. ರೈತರ ಹಿತದೃಷ್ಟಿಯಿಂದ ನಿರ್ಧಾರ ಕೈಗೊಳ್ಳುವ ಭರವಸೆಯನ್ನು ಎರಡೂ ಸರ್ಕಾರಗಳು ನೀಡಿವೆ, ಪ್ರತಿಭಟನಾಕಾರರು ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದಾರೆ.



" ರೈತರ ಹಿತದೃಷ್ಟಿಯಿಂದ ನಿರ್ಧಾರ ಕೈಗೊಳ್ಳುವುದಾಗಿ ಕೇಂದ್ರ ಹಾಗೂ ರಾಜ್ಯ ಎರಡೂ ಸರ್ಕಾರಗಳು ಭರವಸೆ ನೀಡಿವೆ. ಬೆಳಗಾವಿ, ಬಾಗಲಕೋಟೆ, ವಿಜಯಪುರ, ಹುಬ್ಬಳ್ಳಿ-ಧಾರವಾಡ ಮತ್ತು ಹಾವೇರಿ ಜಿಲ್ಲೆಗಳ ರೈತರು ಕಳೆದ ಮೂರು ದಿನಗಳಿಂದ ತಮ್ಮ ಸಮಸ್ಯೆಗಳ ಕುರಿತು ಪ್ರತಿಭಟನೆ ನಡೆಸುತ್ತಿದ್ದಾರೆ. ಸಕ್ಕರೆಯ ಕನಿಷ್ಠ ಬೆಂಬಲ ಬೆಲೆಯನ್ನು ಪ್ರತಿ ಕೆ.ಜಿ.ಗೆ ರೂ.60ಕ್ಕೆ ಹೆಚ್ಚಿಸಬೇಕು ಎಂಬುದು ರೈತರ ಮೊದಲ ಬೇಡಿಕೆಯಾಗಿದೆ. ಈ ವಿಷಯದಲ್ಲಿ ಸರ್ಕಾರದೊಂದಿಗೆ ಚರ್ಚೆ ನಡೆಸಲು ರೈತರು ಸಿದ್ಧರಿದ್ದಾರೆ."

■ ಮೊಹಮ್ಮದ್ ರೋಷನ್
ಬೆಳಗಾವಿ ಜಿಲ್ಲಾಧಿಕಾರಿ

## ಅ.26 ರಂದು ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಶ್ರೀ ರಾವುತರಾಯ-ಮಲ್ಲಯ್ಯ ಜಾತ್ರಾ ಮಹೋತ್ಸವ ಅಂಗವಾಗಿ ರಾಜ್ಯ ಮಟ್ಟದ ಕುಸ್ತಿ ಪಂದ್ಯಾವಳಿ ಏರ್ಪಡಿಸಲಾಗಿದೆ.

ಪಟ್ಟಣದ ಗೆಳೆಯರ ಬಳಗದಿಂದ ಇದೇ ದಿ:26 ರಂದು ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಅಂಬೇಡ್ಕರ್ ವೃತ್ತದ ಹತ್ತಿರದ ಬಿಎಲ್‌ಡಿಇ ಸಂಸ್ಥೆಯ ಹಳೆಯ ಕಾಲೇಜು ಮೈದಾನದಲ್ಲಿ ನಡೆಯುವ ಪಂದ್ಯಾವಳಿಯ ಉದ್ಘಾಟಕರಾಗಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಅಜಯಸಿಂಗ್ ಆಗಮಿಸಲಿದ್ದಾರೆ. ತಾಳಿಕೋಟಿ ಖಾಸ್ಗತೇಶ್ವರ ಮಠದ ಸಿದ್ಧಲಿಂಗ ದೇವರು ಸಾನಿಧ್ಯ ವಹಿಸಲಿದ್ದು, ಎಂಎಲ್‌ಸಿ ಸುನೀಲಗೌಡ ಪಾಟೀಲ ಕುಸ್ತಿಗೆ ಚಾಲನೆ ನೀಡಲಿದ್ದಾರೆ. ಶಾಸಕ ರಾಜುಗೌಡ ಪಾಟೀಲ(ಕುದರಿಸಾಲವಾಡಗಿ) ಅಧ್ಯಕ್ಷತೆ ವಹಿಸಲಿದ್ದಾರೆ.

ಮಾಜಿ ಶಾಸಕರುಗಳಾದ ಸೋಮನಗೌಡ ಪಾಟೀಲ (ಸಾಸನೂರ), ಶರಣಪ್ಪ ಸುಣಗಾರ, ಖ್ಯಾತ ನೇತ್ರ ತಜ್ಞ ಪ್ರಭುಗೌಡ ಲಿಂಗದಳ್ಳಿ(ಚಬನೂರ), ಬಿಜೆಪಿ ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಬಿಜೆಪಿ ಮುಖಂಡ ಬಸನಗೌಡ ಪಾಟೀಲ(ಯಡಿಯಾಪೂರ), ಕಾಂಗ್ರೆಸ್ ನಾಯಕರಾದ ಬಿ.ಎಸ್.ಪಾಟೀಲ (ಯಾಳಗಿ), ಸುಭಾಸ್ ಛಾಯಾಗೋಳ, ಮೈಬೂಬ ತಾಂಬೋಳಿ ಸಹಿತ ಜಿಲ್ಲಾ, ತಾಲ್ಲೂಕು ಮಟ್ಟದ ನಾಯಕರು, ಉದ್ಯಮಿಗಳು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಆಗಮಿಸಲಿದ್ದಾರೆ ಎಂದು ಆಯೋಜಕ ಪ್ರಕಾಶ ಗುಡಿಮನಿ ಹಾಗೂ ಗೆಳೆಯರ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

## ದಾಂಡಿಯಾ ನೃತ್ಯ ನಮ್ಮ ನಾಡಿನ ಸಂಸ್ಕೃತಿ ಗತವೈಭವದ ಪ್ರತೀಕ

### ಸಿಂದಗಿಯಲ್ಲಿ ನವರಾತ್ರಿ ವೈಭವ । ಮಹಿಳೆಯರ ದಾಂಡಿಯಾ ನೃತ್ಯೋತ್ಸವಕ್ಕೆ ಸಾಂಸ್ಕೃತಿಕ ಮೆರುಗು । ಖ್ಯಾತ ಚಲನಚಿತ್ರ ಸಾಹಿತಿ ಹಾಗೂ ಗೀತರಚನೆಕಾರ ಡಾ. ವಿ.ನಾಗೇಂದ್ರ ಪ್ರಸಾದ್ ಅಭಿಮತ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಭಾರತೀಯ ಸಂಸ್ಕೃತಿಯ ವೈವಿಧ್ಯತೆ ಮತ್ತು ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುವ ಸಾಂಪ್ರದಾಯಿಕ ನೃತ್ಯಕಲೆಗಳು ನಮ್ಮ ನಾಡಿನ ಅಮೂಲ್ಯ ಸಾಂಸ್ಕೃತಿಕ ಆಸ್ತಿಗಳಾಗಿವೆ. ನೈಜ ಕಲೆಯನ್ನು ಅನಾವರಣಗೊಳಿಸುವ ದಾಂಡಿಯಾ ನೃತ್ಯರೂಪಕಗಳು ನಮ್ಮ ಸಂಸ್ಕೃತಿ, ಸಂಸ್ಕಾರ ಮತ್ತು ಗತವೈಭವವನ್ನು ಜೀವಂತವಾಗಿ ಬಿಂಬಿಸುತ್ತವೆ ಎಂದು ಖ್ಯಾತ ಚಲನಚಿತ್ರ ಸಾಹಿತಿ ಹಾಗೂ ಗೀತರಚನೆಕಾರ ಡಾ. ವಿ. ನಾಗೇಂದ್ರ ಪ್ರಸಾದ್ ಅಭಿಪ್ರಾಯಪಟ್ಟರು.

ನಗರದ ಮಾಂಗಲ್ಯ ಭವನದಲ್ಲಿ ಡ್ಯಾನಿ ಅಕಾಡೆಮಿ (ರಿ.) ಹಾಗೂ ಎಬಿಸಿಡಿ ಡ್ಯಾನ್ಸ್ ಕ್ಲಾಸ್ ವತಿಯಿಂದ ಅಕ್ಟೋಬರ್ 23ರಂದು ಆಯೋಜಿಸಿದ್ದ 'ನವರಾತ್ರಿ ವೈಭವ ದಾಂಡಿಯಾ ನೃತ್ಯೋತ್ಸವ 2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಬ್ಬಗಳ ತವರೂರಾದ ಭಾರತದಲ್ಲಿ ಪ್ರತಿಯೊಂದು ಹಬ್ಬಕ್ಕೂ ತನ್ನದೇ ಆದ ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವಿದೆ. ಹಬ್ಬಗಳು ಕೇವಲ ಆಚರಣೆಗಳಿಗೆ ಸೀಮಿತವಾಗದೆ ಮನುಷ್ಯ ಸಂಬಂಧಗಳನ್ನು ಬೆಸೆಯುವ, ಸಾಮರಸ್ಯ ಸಾರುವ ಹಾಗೂ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಸಾಂಸ್ಕೃತಿಕ ಸೇತುವೆಗಳಾಗಬೇಕು. ಆಧುನಿಕತೆಯ ಭರಾಟೆಯಲ್ಲಿ ನಮ್ಮ ಮೂಲ ಸಂಸ್ಕೃತಿಯ ಬೇರುಗಳು ಸಡಿಲಗೊಳ್ಳದಂತೆ ಎಚ್ಚರ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ಪವಿತ್ರ ಅಕ್ಕನವರು, ಇನ್ನರ್ ವೀಲ್ ಕ್ಲಬ್ ಮಾಜಿ ಅಧ್ಯಕ್ಷೆ ನಾಗರತ್ನ ಮನಗೂಳಿ ಹಾಗೂ ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾತನಾಡಿದರು.

ಗುತ್ತಿಗೆದಾರ ಮುತ್ತು ಎಂ. ಮುಂಡೇವಾಡಗಿ, ಭಾರತಿ ಹೊಸಮನಿ, ಡಾ. ಅಕ್ಷತಾ ಟಿ. ಗೋಟಗುಣಕಿ, ತಾರಾನಾಥ ರಾಠೋಡ, ಅಶೋಕ ಕೊಳಾರಿ, ಡಾ. ಅನಿಲ ನಾಯಕ, ಮಲ್ಲನಗೌಡ ಎ. ಪಾಟೀಲ, ಮುತ್ತು ಸೊನ್ನದ ಹಾಗೂ ಡ್ಯಾನಿ ಅಕಾಡೆಮಿ ಸಂಚಾಲಕ ಜ್ಞಾನೇಶ ಗುರವ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯಗೆಳೆಯರ ಬಳಗದ ಅಧ್ಯಕ್ಷ ರಾಜಶೇಖರ ಕೂಚಬಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಸಿದ್ಧಲಿಂಗ ಚೌಧರಿ ಸ್ವಾಗತಿಸಿ, ನಿರೂಪಿಸಿದರು.

**ನೋಡುಗರ ಮನಸೂರೆಗೊಂಡ ದಾಂಡಿಯಾ ನೃತ್ಯಗಳು**

ಬಣ್ಣಬಣ್ಣದ ಸಾಂಪ್ರದಾಯಿಕ ಉಡುಗೆಗಳಲ್ಲಿ ಮಹಿಳೆಯರು ಪ್ರದರ್ಶಿಸಿದ ದಾಂಡಿಯಾ ನೃತ್ಯಗಳು ನೋಡುಗರ ಮನಸೂರೆಗೊಂಡವು. ಸುಮಧುರ ಸಂಗೀತ, ಲಯಬದ್ಧ ಹೆಜ್ಜೆಗಳು ಹಾಗೂ ದಾಂಡಿ-ಯಾ ಕೋಲುಗಳ ನಾದ ನವರಾತ್ರಿ ಸಂಭ್ರಮಕ್ಕೆ ವಿಶೇಷ ಮೆರುಗು ನೀಡಿದವು. ಮಹಿಳೆಯರ ಕಲಾತ್ಮಕ ಪ್ರತಿಭೆ ಮತ್ತು ಸಾಂಸ್ಕೃತಿಕ ಒಗ್ಗಟ್ಟಿಗೆ ಕಾರ್ಯಕ್ರಮ ಸಾಕ್ಷಿಯಾಯಿತು.



"ಮಹಿಳೆಯರು ದಾಂಡಿಯಾದಂತಹ ಸಾಂಪ್ರದಾಯಿಕ ನೃತ್ಯಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಕಲೆ ಕೇವಲ ಮನರಂಜನೆಯ ಸಾಧನವಲ್ಲ; ಅದು ಬದುಕಿನ ಮೌಲ್ಯಗಳನ್ನು ಪ್ರತಿಪಾದಿಸುವ, ಸಮಾಜವನ್ನು ಒಗ್ಗೂಡಿಸುವ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಶಕ್ತಿಯುತ ಮಾಧ್ಯಮವಾಗಿದೆ."

■ ಡಾ. ವಿ.ನಾಗೇಂದ್ರ ಪ್ರಸಾದ್
ಖ್ಯಾತ ಚಲನಚಿತ್ರ ಸಾಹಿತಿ

# ನಿನ್ನ ಸೂಜಿಗಣ್ಣಿನ ನೋಟದೊಂದಿಗೆ..

**■ ಪ್ರೀತಿಯನ್ನು ಮನಸ್ಸಿನ ಆಳದಲ್ಲಿ ಅಡಗಿಸಿಡುವುದು ಎಷ್ಟು ಕಷ್ಟವೋ, ಅದನ್ನು ಪ್ರೀತಿಸಿದವರ ಮುಂದೆ ತೆರೆದಿಡುವುದು ಅದಕ್ಕಿಂತಲೂ ಕೋಟಿ ಪಟ್ಟು ಸಾಹಸದ ಕೆಲಸ. ಹೃದಯದ ಕೋಣೆಯಲ್ಲಿ ವರ್ಷಗಟ್ಟಲೆ ಜತನದಿಂದ ಕಾಯ್ದಿರಿಸಿದ ಭಾವನೆಗಳು ಜ್ವಾಲಾಮುಖಿಯಂತೆ ಉಕ್ಕಿ ಹರಿಯುವ ಆ ಕ್ಷಣ ಇದೆಯಲ್ಲ, ಅದು ಇಡೀ ಬದುಕಿನ ಅತ್ಯಂತ ರೋಮಾಂಚಕ ಬಿಂದು. ಮುಚ್ಚಿಟ್ಟ ಪ್ರೀತಿಯನ್ನು ಬಿಚ್ಚಿಡುವ ಮುನ್ನ ಮನಸ್ಸಿನಲ್ಲಿ ನೂರು ಯುದ್ಧಗಳು ನಡೆಯುತ್ತವೆ. "ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ?", "ನಮ್ಮ ಸ್ನೇಹ ದೂರವಾಗಿಬಿಡುತ್ತದೆಯೇ?" ಎಂಬ ಭೀತಿಯಲ್ಲೇ ದಿನಗಳು ಕರಗುತ್ತವೆ. ಆದರೆ, ಧೈರ್ಯ ಮಾಡಿ ಆ ಮೌನದ ಗೋಡೆಯನ್ನು ಒಡೆದು ಒಲವಿನ ಕಥೆಯನ್ನು ಬಿಚ್ಚಿಟ್ಟಾಗ ಅನುಭವಕ್ಕೆ ಬರುವ ನಿರಾಳತೆ ವರ್ಣನಾತೀತ. ಆ ಕ್ಷಣದಲ್ಲಿ ಗಂಟಲು ಒಣಗುತ್ತದೆ, ಕೈಗಳು ನಡುಗುತ್ತವೆ, ಜಗತ್ತಿನ ಎಲ್ಲಾ ಪದಗಳೂ ಮರೆತುಹೋಗುತ್ತವೆ. ಕೇವಲ ಕಣ್ಣುಗಳು ಮತ್ತು ಹೃದಯದ ಬಡಿತ ಮಾತ್ರ ಮಾತನಾಡುತ್ತವೆ. ಒಂದು ವೇಳೆ ಎದುರಿಗಿರುವ ಜೀವವೂ ಅದೇ ಪ್ರೀತಿಯನ್ನು ಕಣ್ಣುಗಳಲ್ಲಿ ಹೊತ್ತು "ನಾನೂ ಇದೇ ಕ್ಷಣಕ್ಕಾಗಿ ಕಾಯುತ್ತಿದ್ದೆ" ಎಂದು ನಕ್ಕರೆ, ಅಂದಿಗೆ ಜನ್ಮ ಧನ್ಯವಾಗುತ್ತದೆ. ಹಳೆಯ ಮೌನವೆಲ್ಲ ಕರಗಿ ಹೊಸದೊಂದು ಪ್ರೇಮಕಾವ್ಯ ಸೃಷ್ಟಿಯಾಗುತ್ತದೆ. ಪ್ರೀತಿಯನ್ನು ಮುಚ್ಚಿಡುವುದು ಒಂದು ತಪಸ್ಸಾದರೆ, ಅದನ್ನು ಬಿಚ್ಚಿಡುವುದು ಆ ತಪಸ್ಸಿಗೆ ಸಿಗುವ ದಿವ್ಯ ವರ!**

■ ಉದಯರಶ್ಮಿ ದಿನಪತ್ರಿಕೆ

**ನನ್ನ ಪ್ರೀತಿಯ ಆರತಿ,**

ಹಲವು ವರ್ಷಗಳಿಂದ ನಾನು (ಆರವ್) ನನ್ನ ಹೃದಯದ ಆಳದಲ್ಲಿ ಒಂದು ಮೌನ ಬಿರುಗಾಳಿಯನ್ನೇ ಹೊತ್ತು ತಿರುಗುತ್ತಿದ್ದೆ. ನಿನ್ನನ್ನು ಕಳೆದುಕೊಂಡುಬಿಡುತ್ತೇನೋ ಎಂಬ ಭಯದಿಂದ, ನಮ್ಮ ಸ್ನೇಹದ ಸುರಕ್ಷಿತ ಮುಖವಾಡದ ಹಿಂದೆ ನನ್ನ ಪ್ರೀತಿಯನ್ನು ಜತನವಾಗಿ ಮುಚ್ಚಿಟ್ಟಿದ್ದೆ. ದಿನನಿತ್ಯ ನಿನ್ನ ಜೊತೆ ನಗುತ್ತಾ, ಹರಟೆ ಹೊಡೆಯುತ್ತಾ ಇದ್ದರೂ, ನಿನ್ನ ಕಣ್ಣುಗಳನ್ನು ನೇರವಾಗಿ ನೋಡಲು ನಾನು ಒದ್ದಾಡುತ್ತಿದ್ದೆ. ಏಕೆಂದರೆ ಆ ಕಣ್ಣುಗಳು ನನ್ನ ಒಳಗೆ ಅಡಗಿರುವ ರಹಸ್ಯವನ್ನು ಎಲ್ಲಿ ಕಂಡುಹಿಡಿದುಬಿಡುತ್ತವೆಯೋ ಎಂಬ ಹೆದರಿಕೆ ನನ್ನದಾಗಿತ್ತು. ಆದರೆ ನಿನ್ನೆಯ ಆ ಮಳೆಗಾಲದ ಸಂಜೆ, ಇನ್ನು ಮುಂದೆ ನನ್ನ ಈ ಒಲವಿನ ಜಗತ್ತನ್ನು ನಿನಗೆ ತಿಳಿಸದೇ ಮುಚ್ಚಿಡಲು ನನ್ನಿಂದ ಸಾಧ್ಯವೇ ಇಲ್ಲ ಎಂದು ನನಗೆ ಮನವರಿಕೆಯಾಯಿತು. ಆ ಕ್ಷಣ ನನ್ನ ಮನಸ್ಸು ನಿನಗಾಗಿ ಹೀಗೆ ಹಾಡುತ್ತಿತ್ತು:

**ಮನದ ಮೂಲೆಲಿ ಕುಳಿತು ಜಿನುಗುತಿದ್ದ ಒಲವು,**
**ಹೇಳಲಾಗದೆ ನಿನ್ನೆದುರು ಕರಗುತಿದ್ದ ಒಲವು.**





**ಕಣ್ಣ ರೆಪ್ಪೆಯ ಹಿಂದೆ ಅಡಗಿ ಕುಳಿತ ಕನಸು,**
**ಇಂದು ನಿನ್ನ ಮುನ್ನಡೆಸಿ ಬಿಚ್ಚಿಟ್ಟಿದೆ ಮನಸು!**

ನಾವಿಬ್ಬರೂ ನಮ್ಮ ನೆಚ್ಚಿನ ಆ ಕಾಫಿ ಶಾಪ್‌ನ ಮೂಲೆಯ ಟೇಬಲ್‌ನಲ್ಲಿ ಮುಖಾಮುಖಿ ಕುಳಿತಿದ್ದೆವು. ಆ ಕ್ಷಣ ನೀನು ಆ ಜಾಗಕ್ಕೆ ನಡೆದು ಬಂದ ವೈಖರಿ ಚಂದ್ರನ ಕಿರಣಗಳಿಂದ ಹೆಣೆದ ನಿಶ್ಯಬ್ದ ಕಾವ್ಯದಂತಿತ್ತು. ಶರತ್ಕಾಲದ ನೀಲಿ ಆಕಾಶದ ಬಣ್ಣದ ರೇಷ್ಮೆ ಸೀರೆಯನ್ನು ಉಟ್ಟಿದ್ದ ನಿನ್ನನ್ನು ನೋಡಿದಾಗ, ನನಗೆ ನಕ್ಷತ್ರಗಳ ನದಿಯೊಂದು ಧರೆಗಿಳಿದಂತೆ ಭಾಸವಾಯಿತು. ನಿನ್ನ ಸೀರೆಯ ಬೆಳ್ಳಿಯ ಜರಿ ನೂಲುಗಳು ಮಂದ ಬೆಳಕಿನಲ್ಲಿ ಜೇಡರ ಬಲೆಗೆ ಸಿಲುಕಿದ ಇಬ್ಬನಿ ಹನಿಗಳಂತೆ ಮಿನುಗುತ್ತಿದ್ದವು. ನಿನ್ನ ಪ್ರತಿಯೊಂದು ನಡವಳಿಕೆಯೂ ನನ್ನ ಪಾಲಿಗೆ ಒಂದು ಜೀವಂತ ಕಲೆಯಾಗಿತ್ತು; ಮುದ್ದಾಗಿ ತಲೆಬಾಗಿಸುವ ನಿನ್ನ ಶೈಲಿ ಸಂಜೆಯ ತಂಗಾಳಿಗೆ ತೂಗಾಡುವ ಕಮಲದಂತೆ ಕಂಗೊಳಿಸುತ್ತಿತ್ತು. ನಿನ್ನ ಸೂಜಿಗಣ್ಣಿನ ನೋಟದೊಂದಿಗೆ ಕೆನ್ನೆಯ ಮೇಲೆ ಬಿದ್ದ ಮುಂಗುರಳನ್ನು ಸರಿಸುವ ನಿನ್ನ ಬೆರಳುಗಳ ಚಲನೆ, ನನ್ನ ಎದೆಯ ಮೇಲೆ ಪಾರಿಜಾತದ ಮೃದು ಎಸಳೊಂದು ಜಾರಿದಂತೆ ಭಾಸವಾಗಿ ಇಡೀ ವಾತಾವರಣವನ್ನೇ ಮಾದಕವಾಗಿಸಿತ್ತು.

ಅದೇ ಸಮಯದಲ್ಲಿ ನಾನು ನನ್ನ ಅಪ್ರತಿಮ ಗಾಂಭೀರ್ಯದಿಂದ ಇಡೀ ಜಾಗವನ್ನು ಆವರಿಸಿಕೊಂಡಿದ್ದೆ. ಕಲ್ಲಿದ್ದಲು ಬಣ್ಣದ ಬ್ಲೇಜರ್ ಮತ್ತು ಬಿಳಿ ಶರ್ಟ್ ಧರಿಸಿದ್ದ ನನ್ನ ಉಡುಗೆಯಲ್ಲಿ ನಿನಗೆ ಆಧುನಿಕ ರಾಜಕುಮಾರನ ಗತ್ತು ಎದ್ದು ಕಾಣುತ್ತಿತ್ತು. ನನ್ನ ಪ್ರತಿಯೊಂದು ಚಲನೆಯೂ ಕಾಡಿನ ಚಿರತೆಯ ಹೆಜ್ಜೆಯಂತೆ ನಿಶ್ಯಬ್ದವೂ, ಆತ್ಮವಿಶ್ವಾಸದಿಂದಲೂ ಕೂಡಿತ್ತು. ಗಲ್ಲಕ್ಕೆ ಕೈಕೊಟ್ಟು ಯೋಚಿಸುವ ನನ್ನ ಶೈಲಿ ಸರಳವಾಗಿದ್ದರೂ, ಆಳವಾದ ಮಹಾಸಾಗರವನ್ನು ಅಡಗಿಸಿಕೊಂಡ ನನ್ನ ಕಣ್ಣುಗಳು ಕಡು ತೀಕ್ಷ್ಣವಾಗಿದ್ದವು. ನಿಂತ ಜಾಗದಲ್ಲೇ ಒಂದು ದಿವ್ಯ ಸೆಳೆತವನ್ನು ಸೃಷ್ಟಿಸುವ ನನ್ನ ವ್ಯಕ್ತಿತ್ವ, ನಿನ್ನನ್ನು ತನ್ನತ್ತ ಸೆಳೆಯುವ ಕಾಂತೀಯ ಶಕ್ತಿಯಂತೆ ಕೆಲಸ ಮಾಡುತ್ತಿತ್ತು.

ಕಿಟಕಿಯ ಗಾಜಿನ ಮೇಲೆ ಮಳೆಹನಿಗಳು ಲಯಬದ್ಧವಾಗಿ ಬಡಿಯುತ್ತಿದ್ದವು, ಆದರೆ ನನ್ನ ಎದೆಯ ಒಳಗೆ ಅದಕ್ಕಿಂತ ದೊಡ್ಡ ಸದ್ದು ಕೇಳಿಸುತ್ತಿತ್ತು. ನಮ್ಮಿಬ್ಬರ ನಡುವಿನ ಆಕರ್ಷಣೆ ಜೋರು ಗುಡುಗಿನಂತೆ ಅಪ್ಪಟ ಸಿಡಿಯಲಿಲ್ಲ; ಬದಲಿಗೆ ಚಂದ್ರನ ಬೆಳಕಿಗೆ ಉಕ್ಕುವ ಕಡಲಿನ ಉಬ್ಬರವಿಳಿತದಂತೆ ಮೌನವಾಗಿ ಸೆಳೆಯಿತು. ನನ್ನ ತೀಕ್ಷ್ಣವಾದ ಕಣ್ಣುಗಳು ನಿನ್ನ ಮುಗ್ಧ ಸೌಂದರ್ಯದ ಕಣ್ಣುಗಳನ್ನು ಸಂಧಿಸಿದಾಗ, ಸುತ್ತಲಿನ ಗದ್ದಲವೆಲ್ಲ ಕ್ಷಣಾರ್ಧದಲ್ಲಿ ಮಾಯವಾಯಿತು. ಅದು ಬೆಂಕಿಯು ನೀರನ್ನು ಸಂಧಿಸಿದಂತಹ ಅದ್ಭುತ ಕ್ಷಣ! ನನ್ನ ಗಂಭೀರ ಕೋನಗಳಿಗೆ ನಿನ್ನ ಮೃದುವಾದ ವಯ್ಯಾರಗಳು ಸರಿಯಾಗಿ ಹೊಂದಿಕೊಂಡಿದ್ದವು. ನಮ್ಮಿಬ್ಬರ ನಡುವಿನ ಗಾಳಿಯಲ್ಲಿ ಒಂದು ಅದೃಶ್ಯ ಪ್ರೇಮದ ತಂತಿ ನೇಯ್ದು ಹೋಗಿತ್ತು, ಮಾತುಗಳು ಹುಟ್ಟುವ ಮುನ್ನವೇ ಆ ತಂತಿ ನನ್ನ ಮತ್ತು ನಿನ್ನ ಆತ್ಮವನ್ನು ಬಿಗಿಯಾಗಿ ಬೆಸೆದುಬಿಟ್ಟಿತ್ತು!

ನಿನ್ನ ಕಾಫಿ ಕಪ್‌ನಿಂದ ಹಬೆ ಏರುತ್ತಿದ್ದಾಗ, ನೀನು ಕಿಟಕಿಂಯ ಹೊರಗೆ ಜಗತ್ತನ್ನು ನೋಡುತ್ತಾ ಮೌನವಾಗಿದ್ದೆ. ನಿನ್ನ ಆ ಸುಂದರವಾದ ಪ್ರಶಾಂತ ಮುಖವನ್ನು ನೋಡುತ್ತಿದ್ದಾಗ, ನನ್ನ ಇಡೀ ಬದುಕು ನಿನ್ನ ಸುತ್ತಲೇ ಹೇಗೆ ಆವರ್ತಿತವಾಗಿದೆ ಎಂಬುದು ನನಗರ್ಥವಾಯಿತು. ನಿನ್ನ ಪಕ್ಕದಲ್ಲೇ ಕುಳಿತಿದ್ದ ನನ್ನ ಇಡೀ ಜಗತ್ತು ಎಷ್ಟು ವೇಗವಾಗಿ ತಲ್ಲಣಿಸುತ್ತಿತ್ತು ಎಂಬುದು ಆ ಕ್ಷಣದವರೆಗೂ ನಿನಗೆ ತಿಳಿದಿರಲಿಲ್ಲ. ನನ್ನ ಹೃದಯದ ಪ್ರತಿ ಬಡಿತವೂ, ಉಸಿರಾಟದ ಪ್ರತಿ ಸದ್ದೂ ನಿನ್ನದೇ ಹೆಸರನ್ನು ಕೂಗಿ ಹೇಳುತ್ತಿತ್ತು.

ನಿನ್ನ ಸಣ್ಣ ನಗುವಿಗೆ ಜಗತ್ತನ್ನೇ ಮರೆಯುವ ನಾನು, ಇಂದು ನಿನ್ನನ್ನು ಕಳೆದುಕೊಳ್ಳುವ ಜೂಜಾಟಕ್ಕೆ ಸಿದ್ಧನಾಗಿದ್ದೆ. ಏಕೆಂದರೆ ಈ ಮೌನ ನನ್ನನ್ನು ಪ್ರತಿದಿನ ಜೀವಂತವಾಗಿ ಕೊಲ್ಲುತ್ತಿತ್ತು. ನನ್ನಲ್ಲಿದ್ದ ಅಷ್ಟೂ ಧೈರ್ಯವನ್ನು ಒಟ್ಟುಗೂಡಿಸಿ, ನಾನು ನಡುಗುತ್ತಿದ್ದ ನನ್ನ ಕೈಯನ್ನು ಟೇಬಲ್ ಮೇಲೆ ಚಾಚಿ ನಿನ್ನ ಮೃದುವಾದ ಹಸ್ತವನ್ನು ನನ್ನ ಕೈಗಳೊಳಗೆ ತೆಗೆದುಕೊಂಡೆ. ನನ್ನ ಆ ಹಠಾತ್ ಸ್ಪರ್ಶಕ್ಕೆ ನಿನ್ನ ಬೆರಳುಗಳು ಒಂದು ಕ್ಷಣ ಸ್ಥಬ್ದವಾದವು. ಇಡೀ ಬ್ರಹ್ಮಾಂಡವೇ ಒಂದು ಕ್ಷಣ ನಿಂತುಹೋದಂತೆ ಭಾಸವಾಯಿತು. ನೀನು ಆಶ್ಚರ್ಯದಿಂದ ಕಣ್ಣೆತ್ತಿ ನನ್ನನ್ನು ನೋಡಿದಾಗ, ಸದಾ ನಿನ್ನ ಕಣ್ಣುಗಳಲ್ಲಿರುತ್ತಿದ್ದ ಆ



ತಮಾಷೆಯ ನೋಟ ಮಾಯವಾಗಿ, ಅಲ್ಲಿ ಒಂದು ಅದ್ಭುತವಾದ ಮೌನ ಆವರಿಸಿತ್ತು. ನಿನ್ನ ಕಣ್ಣುಗಳಲ್ಲಿ ಅಡಗಿದ್ದ ಭಾವನೆಗಳು ನನ್ನ ಉಸಿರಿಗೆ ಹೀಗೆ ಪಿಸುಗುಟ್ಟಿದವು:

**ಸುಡುವ ಉಸಿರಲಿ ನಿನ್ನ ಹೆಸರೇ ಇತ್ತು ತಿಳಿಯದೇ,**
**ನಗುವ ನೆಪದಲಿ ನಿನ್ನ ನೆನಪೇ ಇತ್ತು ಮರೆಯದೇ.**
**ಮಾತ ಸರಪಳಿ ಕಳಚಿ ಪ್ರೀತಿ ಧಾರೆ ಹರಿದಾಗ,**
**ಜೀವ ಜೀವದ ಸಮ್ಮಿಲನಕ್ಕೆ ಕಾಲ ಕೂಡಿ ಬಂದಾಗ!**

ನನ್ನ ಗಂಟಲು ಒಣಗುತ್ತಿತ್ತು, ಕೈಕಾಲುಗಳು ತಣ್ಣಗಾಗುತ್ತಿದ್ದವು. ಆದರೂ ನಿನ್ನ ಕಣ್ಣುಗಳಲ್ಲೇ ಕಣ್ಣಿಟ್ಟು, ನನ್ನ ಕನಸಿನಲ್ಲಿ ನೂರು ಬಾರಿ ಹೇಳಿ ರೂಢಿಯಾಗಿದ್ದ ಆ ಮಾತುಗಳನ್ನು ಮೆಲ್ಲಗೆ ನಿನ್ನ ಕಿವಿಯಲ್ಲಿ ಪಿಸುಗುಟ್ಟಿದೆ: "ನಾನು ನಿನ್ನನ್ನು ಕತ್ತಲೆಯಲ್ಲೇ ತುಂಬಾ ವರ್ಷಗಳಿಂದ ಪ್ರೀತಿಸುತ್ತಾ ಬಂದಿದ್ದೇನೆ. ಸ್ನೇಹ ಎಂಬ ನೆಪದಲ್ಲಿ ಪ್ರತಿದಿನ ನಿನ್ನ ಜೊತೆಗಿದ್ದರೂ, ಪ್ರತಿ ರಾತ್ರಿಯ ನನ್ನ ಪ್ರಾರ್ಥನೆಯಲ್ಲಿ ಬರೀ ನೀನೇ ಇದ್ದೆ. ನನ್ನ ಉಸಿರಿನ ಪ್ರತಿ ಬಡಿತವೂ ನಿನಗೇ ಸೇರಿದ್ದು. ನನ್ನ ಇಡೀ ಬದುಕನ್ನು ನಿನ್ನ ಪ್ರೀತಿಯ ನೆರಳಿನಲ್ಲಿ ಕಳೆಯುವುದಕ್ಕಿಂತ ದೊಡ್ಡ ವರ ನನಗೆ ಬೇರೊಂದಿಲ್ಲ. ನೀನು ನನ್ನನ್ನು ಪ್ರೀತಿಸುತ್ತೀಯಾ?"

ಮಾತುಗಳು ಮುಗಿದಾಗ ನನ್ನ ಎದೆ ಭಾರವಾಗಿತ್ತು. ನೀನು ತಕ್ಷಣವೇ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಯುಗದಂತೆ ಭಾಸವಾದ ಆ ಒಂದು ಕ್ಷಣ, ನೀನು ಕೇವಲ ಶೂನ್ಯವನ್ನು ದಿಟ್ಟಿಸುತ್ತಾ ಮೌನಕ್ಕೆ ಶರಣಾದೆ. ಆ ಕ್ಷಣ ನನ್ನ ಹೃದಯದ ಬಡಿತವೇ



ನಿಂತುಹೋದಂತಾಯಿತು. ನನ್ನ ಕಣ್ಣುಗಳಲ್ಲಿ ನಿರಾಸೆಯ ಕಣ್ಣೀರು ಜಿನುಗುವ ಮುನ್ನವೇ, ಅದ್ಭುತವೊಂದು ಸಂಭವಿಸಿತು. ನಿನ್ನ ತುಟಿಯಂಚಿನಲ್ಲಿ ಒಂದು ಮುದ್ದಾದ ನಗು ಮೂಡಿತು ಮತ್ತು ನಿನ್ನ ಕಣ್ಣುಗಳು ಆನಂದದ ಹನಿಗಳಿಂದ ಒದ್ದೆಯಾದವು.

**ತುಟಿಗಳು ಮೌನವಾಗಿ ಕಣ್ಣುಗಳು ಮಾತನಾಡಿದಾಗ,**
**ಯುಗ ಯುಗಗಳ ಕಾಯುವಿಕೆ ಕೊನೆಗೆ ತೀರಿದಾಗ,**
**ಮುಚ್ಚಿಟ್ಟ ಪ್ರೀತಿಯನು ನಿನ್ನೆದುರು ಬಿಚ್ಚಿಟ್ಟಾಗ,**
**ಇಡೀ ಜಗವೇ ಹೊಸದಾಗಿ ಬಣ್ಣ ಬದಲಿಸಿದಾಗ!**

ನೀನು ಏನೂ ಮಾತನಾಡದೇ, ನಿನ್ನ ಇನ್ನೊಂದು ಕೈಯನ್ನು ನನ್ನ ಹಸ್ತದ ಮೇಲಿಟ್ಟು ಗಟ್ಟಿಯಾಗಿ ಒತ್ತಿದೆ. ಆ ಸ್ಪರ್ಶದಲ್ಲೇ ನನ್ನ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕಿತ್ತು. ನಿನ್ನ ಕಣ್ಣೀರು ಮತ್ತು ಆ ನಗು ನನಗೆ ಹೇಳುತ್ತಿದ್ದವು–ನೀನು ಕೂಡ ಇದೇ ಕ್ಷಣಕ್ಕಾಗಿ ಕಾಯುತ್ತಿದ್ದೆ ಎಂದು! ಆ ಸುಂದರ ಮೌನದ ಸ್ಪರ್ಶದಲ್ಲಿ, ನನ್ನ ಆತ್ಮವು ವರ್ಷಗಳಿಂದ ಹುಡುಕುತ್ತಿದ್ದ ಉತ್ತರ ನಿನಗೆ ಸಿಕ್ಕಿಬಿಟ್ಟಿತ್ತು. ಇಷ್ಟು ದಿನ ನಮ್ಮಿಬ್ಬರ ಮಧ್ಯೆ ಇದ್ದ ಸ್ನೇಹದ ಗೋಡೆ ಕರಗಿ ಹೋಗಿ, ಅಲ್ಲಿ ಕೇವಲ ಪ್ರೀತಿಯ ಮಹಾಸಾಗರ ಮಾತ್ರ ಉಳಿದಿತ್ತು. ನಮ್ಮಿಬ್ಬರ ವಿಭಿನ್ನ ದಾರಿಗಳು ಒಂದಾದವು, ಮತ್ತು ನನ್ನ ಮುಚ್ಚಿಟ್ಟ ಪ್ರೀತಿ ಕೊನೆಗೂ ನಿನಗೆ ಸ್ವಂತವಾಯಿತು. ಇನ್ನುಳಿದ ಬದುಕಿನ ಪ್ರತಿ ಹೆಜ್ಜೆಯಲ್ಲೂ ನಾನು ನಿನ್ನವನಾಗಿಯೇ ಇರುತ್ತೇನೆ.

**ಎಂದಿಗೂ ನಿನ್ನವನೇ,**
**ಆರವ್**




■ ಜಯಶ್ರೀ ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ ಮೊ:9449234142

# ನೇರ ರಸ್ತೆ ನಿರ್ಮಿಸಲು ಒತ್ತಾಯ



ಬೀದರ್: ಇಲ್ಲಿಯ ನ್ಯೂ ಆದರ್ಶ ಕಾಲೊನಿಯ ರೈಲ್ವೆ ಕೆಳಸೇತುವೆ (ಬಚ್ಚಾ ಲೇಔಟ್) ಮೂಲಕ ವಾಯುಪಡೆ ತರಬೇತಿ ಕೇಂದ್ರದ ಮಾರ್ಗವಾಗಿ ಬೀದರ್–ಉದಗಿರ ರಸ್ತೆ ವರೆಗೆ ನೇರ ಸಂಪರ್ಕ ರಸ್ತೆ ನಿರ್ಮಿಸಬೇಕು ಎಂದು ಬೀದರ್ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಒತ್ತಾಯಿಸಿದೆ.

ಸಂಸ್ಥೆಯ ಅಧ್ಯಕ್ಷ ಬಿ.ಜಿ. ಶೆಟಕಾರ್ ಹಾಗೂ ಕಾರ್ಯದರ್ಶಿ ಡಾ. ವೀರೇಂದ್ರ ಶಾಸ್ತ್ರಿ ಅವರು ಈ ಕುರಿತು ಪ್ರಜಾ ಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತಾ ಅವರಿಗೆ ಪತ್ರ ಬರೆದಿದ್ದಾರೆ.

ಸದ್ಯ ಇರುವ ಸಣ್ಣ ಸಣ್ಣ ತಿರುವುಗಳಿಂದ ಕೂಡಿದ ರಸ್ತೆ ಅಪಘಾತ ವಲಯವಾಗಿ ಮಾರ್ಪಟ್ಟಿದೆ. ನೇರ ರಸ್ತೆ ನಿರ್ಮಿಸಿದರೆ ನಗರದ ಪೂರ್ವ ಭಾಗದ ನಾಗರಿಕರು, ವ್ಯಾಪಾರಿಗಳು, ವಿದ್ಯಾರ್ಥಿಗಳು ಹಾಗೂ ವಾಹನ ಸವಾರರಿಗೆ ಅನುಕೂಲವಾಗಲಿದೆ. ನಗರದ ಸಂಚಾರ ದಟ್ಟಣೆ ಕಡಿಮೆ ಆಗಿಸುವಲ್ಲಿಯೂ ಇದು ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದ್ದಾರೆ.

ನೇರ ರಸ್ತೆಗೆ ಸಂಬಂಧಿಸಿದಂತೆ ಸಂಸ್ಥೆ 2014–15ನೇ ಸಾಲಿನಿಂದ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳಿಗೆ ಪತ್ರ ಬರೆಯುತ್ತ ಬಂದಿದೆ. ಈವರೆಗೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಸ್ತೆ ಯೋಜನೆಯ ಅನುಷ್ಠಾನಕ್ಕಾಗಿ ಭಾರತೀಯ ವಾಯುಪಡೆಗೆ ಸೇರಿದ ಜಮೀನು ವಿನಿಮಯಕ್ಕೆ ಸಂಬಂಧಿಸಿದಂತೆ ರೂ. 45.93 ಲಕ್ಷ ಪರಿಹಾರ ಮೊತ್ತವನ್ನು ಬೀದರ್ ಮಹಾನಗರ ಪಾಲಿಕೆ ಭಾರತೀಯ ವಾಯುಪಡೆಗೆ ಪಾವತಿಸಬೇಕಾಗಿದ್ದು, ಈ ಮೊತ್ತದ ಪಾವತಿ ಬಾಕಿ ಇದೆ ಎಂದು ತಿಳಿಸಿದ್ದಾರೆ.

ಭಾರತೀಯ ವಾಯುಪಡೆಗೆ ಸಂದಾಯ ಮಾಡಬೇಕಾದ ಮೊತ್ತದ ಡಿಮ್ಯಾಂಡ್ ನೋಟ್ ಅನ್ನು ತುರ್ತಾಗಿ ರೂಪಿಸಿ, ಬೀದರ್ ಮಹಾನಗರ ಪಾಲಿಕೆಯಿಂದ ಸಲ್ಲಿಸುವಂತೆ ನಿರ್ದೇಶನ ನೀಡಬೇಕು.

ನೇರ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

# ಕಲ್ಯಾಣ ಕರ್ನಾಟಕದ 70 ಸಾಧಕರಿಗೆ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ

ಬೀದರ್: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸಾಧಕರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿರುವ ಕಲ್ಯಾಣ ಕರ್ನಾಟಕ ಉತ್ಸವ ಮತ್ತು ಕಲಾ ಸಂಸ್ಕೃತಿ ಸಂಘವು, ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲು ಮುಂದಾಗಿದೆ ಎಂದು ಸಂಘದ ಅಧ್ಯಕ್ಷ ಪ್ರವಿಣಕುಮಾರ ಬಾಡಿಯಾಳ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಲ್ಯಾಣ ಕರ್ನಾಟಕ ಭಾಗದಲ್ಲಿ ಅನೇಕ ಪ್ರತಿಭಾವಂತ ಕಲಾವಿದರು, ಸಾಹಿತಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರಿದ್ದಾರೆ. ಆದರೆ, ಅವರ ಸಾಧನೆಗೆ ಸೂಕ್ತ ಮನ್ನಣೆ ದೊರೆಯುತ್ತಿಲ್ಲ. ಅಂತಹ ಸಾಧಕರನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಸಂಘದ ವತಿಯಿಂದ ಪ್ರಥಮ ಬಾರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ 60ರಿಂದ 70 ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡುವ ಗುರಿ ಹೊಂದಲಾಗಿದೆ. ಕಲೆ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಶಿಕ್ಷಣ, ಕೃಷಿ, ಆರೋಗ್ಯ, ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಉದ್ಯಮ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರನ್ನು ಗುರುತಿಸಿ ಗೌರವಿಸಲಾಗುವುದು ಎಂದು ಹೇಳಿದರು.

'ಪ್ರಶಸ್ತಿಗೆ ಅರ್ಹ ಸಾಧಕರನ್ನು ಆಯ್ಕೆ ಮಾಡಲು ಆರರಿಂದ ಏಳು ಸದಸ್ಯರ ವಿಶೇಷ ಸಮಿತಿ ರಚಿಸಲಾಗಿದೆ. ಸಾಧಕರ ಸೇವೆ, ಸಾಧನೆಯ ವಿವರ ಹಾಗೂ ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗುವುದು. ಈ ಮೂಲಕ ಕಲ್ಯಾಣ ಕರ್ನಾಟಕದ ಪ್ರತಿಭಾವಂತರ ಸಾಧನೆಯನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ' ಎಂದು ವಿವರಿಸಿದರು.

# ವಿದ್ಯಾರ್ಥಿಗಳ ಸಾಧನೆ ಗುರುತಿಸುವುದರಿಂದ ಆತ್ಮವಿಶ್ವಾಸ ಹೆಚ್ಚಳ: ಸಂದೀಪ ಮಹಾರಾಜ ತೆಲಗಾಂವಕರ

ಬೀದರ್: ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಗೌರವಿಸುವುದರಿಂದ ಅವರಲ್ಲಿ ಮತ್ತಷ್ಟು ಸಾಧನೆ ಮಾಡುವ ಉತ್ಸಾಹ ಮತ್ತು ಆತ್ಮವಿಶ್ವಾಸ ಮೂಡುತ್ತದೆ ಎಂದು ಹರಿಭಕ್ತ ಪರಾಯಣಕಾರ ಸಂದೀಪ ಮಹಾರಾಜ ತೆಲಗಾಂವಕರ ಹೇಳಿದರು.

ಜಿಲ್ಲೆಯ ಭಾಲ್ಕಿ ತಾಲೂಕಿನ ಮೆಹಕರ್ ಗ್ರಾಮದ ಶಂಕರಲಿಂಗ ದೇವಾಲಯದಲ್ಲಿ ದಸರಾ ಹಬ್ಬದ ಅಂಗವಾಗಿ ಅ.20ರಂದು ಮೆಹಕರ್ ಶಿಕ್ಷಕರ ಸಂಘದ ವತಿಯಿಂದ ಆಯೋಜಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬೀದರ್ ಜಿಲ್ಲೆಯ ಮೆಹಕರ್ ಗ್ರಾಮದಲ್ಲಿ ಶಿಕ್ಷಕರ ಸಂಘವು ಇಂತಹ ಸಮಾಜಮುಖಿ ಕಾರ್ಯಕ್ರಮ ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ. ಗ್ರಾಮೀಣ ಮಟ್ಟದಲ್ಲಿ ಇಂತಹ ವಿಶಿಷ್ಟ ಕಾರ್ಯಕ್ರಮವನ್ನು ಕಂಡು ಸಂತೋಷವಾಗಿದೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದರ ಜತೆಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಗೌರವಿಸುತ್ತಿರುವುದು ಮಾದರಿ ಕಾರ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿ ಹೊಂದಿ ಸಾಧನೆಯತ್ತ ಮುನ್ನಡೆಯಬೇಕು. ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದರ ಜತೆಗೆ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಗಿಡಗಳನ್ನು ನೆಟ್ಟು ಪೋಷಿಸುವ ಮೂಲಕ ಹಸಿರು ಪರಿಸರ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಅಲ್ಲದೆ, ವಿದ್ಯುತ್, ಬ್ಯಾಂಕಿಂಗ್ ಮತ್ತು ಆರೋಗ್ಯ ಇಲಾಖೆಯ ನೌಕರರು, ಪ್ರಸಕ್ತ ವರ್ಷ ನಿವೃತ್ತರಾದ ಸರ್ಕಾರಿ ನೌಕರರು, ಬಡ್ತಿ ಹೊಂದಿದ ಶಿಕ್ಷಕರು, ವಿಶೇಷ ಸಾಧನೆ ಮಾಡಿದ ಹಾಗೂ ಜಿಲ್ಲಾ ಮತ್ತು ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತ ಶಿಕ್ಷಕರನ್ನು ಶಾಲು, ಪುಷ್ಪಹಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶಿವರಾಜ ಪಾಟೀಲ ಮಾತನಾಡಿದರು.

ಕನ್ನಡ ಭಾಷೆಯ ವಾಗ್ಮಿ ದಯಾನಂದ ಬಿದವೆ ಮಾತನಾಡಿ, ಮೆಹಕರ್ ಗ್ರಾಮಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ನಿಜಾಮರ ಆಡಳಿತದ ವಿರುದ್ಧ ನಡೆದ ಸ್ವಾತಂತ್ರ್ಯ



ಹೋರಾಟದಲ್ಲಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರು ಮಹತ್ವದ ಪಾತ್ರ ವಹಿಸಿದ್ದರು ಎಂದು ಸ್ಮರಿಸಿದರು.

2019ರಿಂದ ಸಮಾಜಮುಖಿ ಕಾರ್ಯ: ಪ್ರಾಸ್ತಾವಿಕವಾಗಿ ಮಾತನಾಡಿದ ಹಿರಾಸಿಂಗ್ ಭೋಯಿ, 2019ರಲ್ಲಿ ವಾಪ್ ಗುಂಪಿನ ಮೂಲಕ ಆರಂಭವಾದ ಮೆಹಕರ್ ಶಿಕ್ಷಕರ ಸಂಘವು ನಿರಂತರವಾಗಿ ಸಮಾಜಮುಖಿ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಈವರೆಗೆ ಗ್ರಾಮದ ನಿವೃತ್ತ ನೌಕರರು, ಸೈನಿಕರು, 50ಕ್ಕೂ ಹೆಚ್ಚು ವೈದ್ಯರು, ಐಐಟಿ ಹಾಗೂ ನೀಟ್ ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು, ಕುಸ್ತಿಪಟುಗಳು, ಸಂಗೀತಗಾರರು, ಬಸ್ ಚಾಲಕರು, ನಿರ್ವಾಹಕರು, ಕ್ರೀಡಾಪಟುಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸಲಾಗಿದೆ. ಪ್ರತಿಭೆ ಹಾಗೂ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಸಂಘದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಲ್ಕಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಖಜಾಂಚಿ ಸತ್ಯವಾನ್ ಕಾಂಬಳೆ, ಇಸಿಒ ಅರ್ಜುನರಾವ್ ಕಾಂಬಳೆ, ವಾಮನರಾವ್ ಪಾಟೀಲ, ರಾಮ ಮೋರೆ, ಜಾಧವ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಶಿಕ್ಷಕರಾದ ಪ್ರಭು ಮಂಗಣೆ, ಅಂಗದ್ ಗರಾಂಡೆ, ಅಶೋಕ್ ಪಾಟೀಲ, ಶ್ರೀಮಂತರಾವ್ ಮೋರೆ, ಶಿವಾಜಿರಾವ್ ವಾಘಮೋಡೆ, ದತ್ತಾ ಬಿರಾದಾರ, ಚೆನ್ನಪ್ಪ ಸ್ವಾಮಿ, ಶಿವಪುತ್ರ ಯಾಲಾ, ಜಾಲೇಂದರ್ ಜೇಧೆ, ಸುಭಾಷ್ ಕಾಂಬಳೆ, ಗೋವಿಂದ ಪಾಟೀಲ, ಮಹಾದೇವ ಕಾಂಬಳೆ, ಬಾಲಾಜಿ ಶಿಂಧೆ, ಶಿವಕುಮಾರ್ ಚಿಡಗುಪ್ಪೆ, ವೆಂಕಟ್ ಗಾಯಮಾಳೆ, ವೆಂಕರಾವ್ ಹಡೋಳೆ, ಸಂತೋಷ್ ಹಿಲಾಲಪುರೇ, ರಾಮ ಕಾಂಬಳೆ, ರಮೇಶ್ ಬಿಡವೆ, ದತ್ತಾ ಸಾಬಣೆ, ಪುಂಡಲೀಕ ಮಾನೆ, ಮನೋಜ್ ಶಿಂಧೆ, ಅಭಂಗ್ ಲಾಡ್, ಬಜರಂಗ್ ಭೋಯಿ, ವೆಂಕಟ್ ಢೋಳೆ, ಜಗನ್ನಾಥ ಅಂಬರ್ ಶೆಟ್ಟೆ, ಧೋಂಡಿಬಾ ಮೆಹತ್ರೆ, ಅರವಿಂದ್ ಸಾವರೆ, ಸಂತೋಷ್ ಪಾಟೀಲ, ಶಬ್ಬೀರ್ ಬೋನಂಗೆ, ವೈಜನಾಥ್ ಅಂಬರ್ ಶೆಟ್ಟೆ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಆರಂಭದಲ್ಲಿ ಪುಷ್ಪಾವತಿ ಆನ್ಸರವಾಡೆ ಭಕ್ತಿಗೀತೆ ಹಾಡಿದರು. ಸಂಧ್ಯಾ ಮತ್ತು ತಂಡದವರು ಸ್ವಾಗತಗೀತೆ ಪ್ರಸ್ತುತಪಡಿಸಿದರು. ದಿಗಂಬರ ತೆಲಂಗ ಸ್ವಾಗತಿಸಿದರು. ಸಂಗಮೇಶ್ ಮಂಗಣೆ ಕನ್ನಡದಲ್ಲಿ ಹಾಗೂ ಬಲಿರಾಮ್ ಮೋರೆ ಮರಾಠಿಯಲ್ಲಿ ಕಾರ್ಯಕ್ರಮ ನಿರೂಪಿಸಿದರು. ಪ್ರಕಾಶ್ ಸಾವರೆ ವಂದಿಸಿದರು.

# ಕೇಳಿಸಿಕೊಳ್ಳುವ ಪ್ರಕ್ರಿಯೆ






ಬಹುತೇಕ ವಿದ್ಯಾರ್ಥಿಗಳು ಕೇಳಿಸಿಕೊಳ್ಳುವ ಪ್ರಥಮ ಹಂತದ ಪ್ರಕ್ರಿಯೆಯಲ್ಲಿ ವಿಫಲರಾಗಿ ಮುಂದಿನೆಲ್ಲಾ ಪ್ರಕ್ರಿಯೆಗಳಲ್ಲೂ ವಿಫಲರಾಗುತ್ತಾರೆ. ಪಾಠವನ್ನು ಸಮರ್ಪಕವಾಗಿ ಕಿವಿಯು ಕೇಳಿಸಿಕೊಂಡಾಗ ಅದನ್ನು ಮೆದುಳಿನಲ್ಲಿರುವ ನರವ್ಯೂಹವು ಸಮರ್ಪಕವಾಗಿ ಗ್ರಹಿಸಿ ಅರ್ಥೈಸಿಕೊಂಡು ನೆನಪಿಟ್ಟುಕೊಳ್ಳುತ್ತದೆ. ನಂತರ ನಿರ್ದಿಷ್ಟವಾದ ಅಂಗಗಳಿಗೆ ಪ್ರತಿಕ್ರಿಯಿಸಲು (ಮಾತಿನ ರೂಪದಲ್ಲಿ, ಬರವಣಿಗೆಯ ರೂಪದಲ್ಲಿ, ಸಂಜ್ಞೆಗಳ ರೂಪದಲ್ಲಿ ಯಾ ಕೆಲಸದ ರೂಪದಲ್ಲಿ) ಸೂಚನೆಯನ್ನು ನೀಡುತ್ತದೆ.

■ **ಉದಯರಶ್ಮಿ ದಿನಪತ್ರಿಕೆ**

ಕೇಳಿಸಿಕೊಳ್ಳಲು ಕಿವಿ ಅವಶ್ಯವಾಗಿ ಬೇಕು. ಕಿವಿಯಲ್ಲಿ 3 ವಿಧಗಳಿದ್ದು, ಹೊರ ಕಿವಿ, ನಡು ಕಿವಿ, ಹಾಗೂ ಒಳ ಕಿವಿ. ಹೊರಕಿವಿಯಲ್ಲಿರುವ ಭಾಗಗಳೆಂದರೆ ಕಿವಿಯ ಹಾಲೆ (ಪಿನ್ನಾ) ಮತ್ತು ಕರ್ಣನಾಳ. ಇದು ಕಿವಿಯ ಹಾಲೆಯಿಂದ ಕಿವಿಯ ತಮಟೆಯವರೆಗೆ ಆವರಿಸಿದೆ. ಪರಿಸರದಲ್ಲಿ ಉಂಟಾಗುವ ಶಬ್ದಗಳನ್ನು ನಮ್ಮ ಹೊರಕಿವಿಯನ್ನು ಮೊದಲು ತಲುಪುತ್ತವೆ. ಹೊರಕಿವಿಯ ವಿಶಿಷ್ಟ ಆಕಾರದಿಂದ ಶಬ್ದ ಶೇಖರಣೆಯಾಗುತ್ತದೆ. ಹೊರಕಿವಿಯ ಹಾಲೆ ಮತ್ತು ನಾಳವು ಶಬ್ಧವನ್ನು ಶೇಖರಿಸಿ ಮಧ್ಯಕಿವಿಗೆ ವರ್ಗಾಯಿಸುತ್ತದೆ. ಹೊರಕಿವಿಯಿಂದ ಹಾದು ಹೋದ ಶಬ್ಧದ ಅಲೆಗಳು ಕಿವಿಯ ತಮಟೆಯನ್ನು ಮುಟ್ಟಿದಾಗ ಕಿವಿಯ ತಮಟೆಯ ಚಲನೆ ಸೂಕ್ಷ್ಮವಾಗಿರುತ್ತದೆ ಹಾಗೂ ಹೆಚ್ಚಿನ ಪ್ರಮಾಣದ ಶಬ್ಧಗಳಿಗೆ ತಮಟೆಯ ಚಲನೆ ಹೆಚ್ಚಿನ ಪ್ರಮಾಣದ್ದಾಗಿರುತ್ತದೆ. ಈ ತಮಟೆ ಪದರಗಳಿಂದ ಕೂಡಿರುತ್ತದೆ.

ಮಧ್ಯಕಿವಿಯು ತಮಟೆಯ ಹೊರ ಹಾಗೂ ಮಧ್ಯಕಿವಿಯನ್ನು




ಬೇರ್ಪಡಿಸುತ್ತದೆ. ತಮಟೆಗೆ ಬಂದು ತಲುಪಿದ ಶಬ್ಧ ಅದರ ಚಲನೆಯಿಂದ ತಮ್ಮೊಳಗೆ ಹುದುಗಿಸಿಕೊಂಡಿರುವ ಮೂಳೆಗಳಿಗೆ ವರ್ಗಾವಣೆಯಾಗುತ್ತದೆ. ಆ ಮೂಳೆಗಳು ಕ್ರಮವಾಗಿ ಇಂಕಸ್, ಮ್ಯಾಲಿಯಸ್, ಸ್ಟೆಪಿಸ್ ಮೂಲಕ ಶಬ್ಧಗಳನ್ನು ರವಾನಿಸುತ್ತದೆ. ಈ ಮೂರು ಮೂಳೆಗಳಲ್ಲಿ ದೊಡ್ಡದಾದದ್ದು ಕಿವಿಯ ತಮಟೆಯಲ್ಲಿ ಹುದುಗಿದ್ದರೆ, ಚಿಕ್ಕದು ಒಳಕಿವಿಯೊಂದಿಗೆ ಸಂಪರ್ಕ ಹೊಂದಿರುತ್ತದೆ.




ಒಳಕಿವಿಗೆ ಚಕ್ರವ್ಯೂಹ ಎಂದು ಕರೆಯುತ್ತಾರೆ. ಒಳಕಿವಿ ಒಂದು ಬಟಾಣಿ ಕಾಳಿನ ಗಾತ್ರದಷ್ಟಿದ್ದು, ಇದು ಅತೀ ತೊಡಕಾದ ಕಾರ್ಯ ವ್ಯಾಪ್ತಿಯನ್ನು ಹೊಂದಿದೆ. ಇದರ ಕಾರ್ಯದ ದೃಷ್ಟಿಯಿಂದ ಒಳಕಿವಿಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ ಕಾಕ್ಲಿಯ ಮತ್ತು ವೆಸ್ಟಬ್ಯುಲಾರ್ ಮೆಕಾನಿಸಂ.

ಕಾಕ್ಲಿಯವು ಕೇಳಿಸಿಕೊಳ್ಳುವಲ್ಲಿ ಅತೀ ಪ್ರಮುಖ ಪಾತ್ರವಹಿಸುವ ಅಂಗವಾಗಿದೆ. ಇದು ಒಳಕಿವಿಯ ಕೆಳಭಾಗದಲ್ಲಿದ್ದು ಬಸವನ ಹುಳುವಿನ ಆಕಾರವನ್ನು ಹೊಂದಿದ್ದು, ಎರಡೂವರೆ ಸುತ್ತುಗಳನ್ನು ಹೊಂದಿದೆ. ವೆಸ್ಟ ಬ್ಯುಲಾರ್ ಮೆಕಾನಿಸಂ ಮಧ್ಯಕಿವಿಯಿಂದ ಒಳಕಿವಿಗೆ ಸಂಪರ್ಕ ಹೊಂದಿದೆ. ಈ ಭಾಗದಲ್ಲಿ ಸಮತೋಲನದ ಅಂಗಗಳಾದ ಅರ್ಧ ಚಂದ್ರಾಕಾರದ ನಾಳವಿದ್ದು, ಇದು ಕಿವಿಯ ಒಳಭಾಗದಲ್ಲಿರುತ್ತದೆ.

ಕಿವಿಯು ಶಬ್ಧದ ತರಂಗಗಳನ್ನು ಸಂಗ್ರಹಿಸಿ ಹೊರ ಕಿವಿಯ ನಾಳದಲ್ಲಿ ಹಾದು ಹೋಗುವಂತೆ ಮಾಡುತ್ತದೆ. ಈ ಶಬ್ಧ ತರಂಗಗಳು ಕಿವಿಯ ತಮಟೆಯ ಹೊಡೆದು ತಮಟೆಯು ಕಂಪಿಸುತ್ತದೆ.

ಈ ತಮಟೆಯು ಅಂಟಿಕೊಂಡಿರುವ ಮಧ್ಯಕಿವಿಯು ಮೂರು ಮೂಳೆಗಳ ಸರಪಳಿಯು ಈ ಕಂಪನವನ್ನು ಒಳಕಿವಿಗೆ ಸಾಗಿಸುತ್ತದೆ. ಈ ಕಂಪನಗಳು ಕಾಕ್ಲಿಯಾದ ಸುತ್ತಲಿರುವ ಪೆರಿಲಿಂಪ್ ದ್ರವವನ್ನು ಚೇತನಗೊಳಿಸಿ ಅದರಲ್ಲಿ ಕಂಪನಗಳನ್ನು ಉಂಟುಮಾಡುತ್ತದೆ. ಇದರಿಂದ ಕಾಕ್ಲಿಯಾದ ಒಳಗಿರುವ ಎಂಡೋಲಿಂಫ್ ದ್ರವದಲ್ಲಿ ಕಂಪನಗಳು ಉತ್ಪನ್ನವಾಗಿ ಕಾಟಿ ಅಂಗವನ್ನು ಪ್ರಚೋದಿಸುತ್ತದೆ. ಈ ಪ್ರಚೋದನೆಗಳನ್ನು ಕಾಟಿ ಅಂಗದಲ್ಲಿರುವ ಗ್ರಾಹಕಗಳು ಸ್ವೀಕರಿಸಿ ಶ್ರವಣ ನರಗಳ ಮೂಲಕ ಮೆದುಳಿಗೆ ಕಳಿಸುತ್ತದೆ. ಮೆದುಳಿನಲ್ಲಿರುವ ಈ ಸಂದೇಶಗಳನ್ನು ಅರ್ಥೈಯಿಸಲ್ಪಟ್ಟಾಗ ನಮಗೆ ಶಬ್ಧ ಕೇಳುತ್ತದೆ. ಹೀಗೆ ಅತೀ ಕಡಿಮೆ ಅವಧಿಯಲ್ಲಿ ಕೇಳಿಸಿಕೋಳ್ಳುವ ಕ್ರಿಯೆ ಪೂರ್ಣವಾಗುತ್ತದೆ.

ಹಾಗಾಗಿ ವಿದ್ಯಾರ್ಥಿಗಳು ಶಾಲೆಯಲ್ಲಿ ಶಿಕ್ಷಕರು ಹೇಳುವ ಪಾಠವನ್ನು ಸರಿಯಾಗಿ ಕೇಳಿಸಿಕೊಳ್ಳಬೇಕು. ಬಹುತೇಕ ವಿದ್ಯಾರ್ಥಿಗಳು ಕೇಳಿಸಿಕೊಳ್ಳುವ ಪ್ರಥಮ ಹಂತದ ಪ್ರಕ್ರಿಯೆಯಲ್ಲಿ ವಿಫಲರಾಗಿ ಮುಂದಿನೆಲ್ಲಾ ಪ್ರಕ್ರಿಯೆಗಳಲ್ಲೂ ವಿಫಲರಗುತ್ತಾರೆ. ಪಾಠವನ್ನು ಸಮರ್ಪಕವಾಗಿ ಕಿವಿಯು




ಕೇಳಿಸಿಕೊಂಡಾಗ ಅದನ್ನು ಮೆದುಳಿನಲ್ಲಿರುವ ನರವ್ಯೂಹವು ಸಮರ್ಪಕವಾಗಿ ಗ್ರಹಿಸಿ ಅರ್ಥೈಸಿಕೊಂಡು ನೆನಪಿಟ್ಟುಕೊಳ್ಳುತ್ತದೆ. ನಂತರ ನಿರ್ದಿಷ್ಟವಾದ ಅಂಗಗಳಿಗೆ ಪ್ರತಿಕ್ರಿಯಿಸಲು (ಮಾತಿನ ರೂಪದಲ್ಲಿ, ಬರವಣಿಗೆಯ ರೂಪದಲ್ಲಿ, ಸಂಜ್ಞೆಗಳ ರೂಪದಲ್ಲಿ ಯಾ ಕೆಲಸದ ರೂಪದಲ್ಲಿ) ಸೂಚನೆಯನ್ನು ನೀಡುತ್ತದೆ.

ಆದ್ದರಿಂದ ವಿದ್ಯಾರ್ಥಿಗಳು ಸಮರ್ಪಕವಾಗಿ ವಿಚಾರವನ್ನು ಕೇಳಿಸಿಕೊಳ್ಳದಿದ್ದಾಗ ಮೆದುಳು ಗ್ರಹಿಸಲು ವಿಫಲವಾಗಿ ಪಠ್ಯವು ಅರ್ಥವಾಗದೇ ಅಧ್ಯಯನವು ಕಠಿಣವಾಗುತ್ತದೆ. ಮತ್ತು ನಿರ್ದಿಷ್ಟ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿಯೂ ಹಿನ್ನಡೆಯಾಗುತ್ತದೆ.

■ ಸಂತೋಷ್ ರಾವ್ ಪೆರ್ಮುಡ.
ಪೆರ್ಮುಡ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ – ದ.ಕನ್ನಡ ಜಿಲ್ಲೆ

# ಯಡಗಾದಲ್ಲಿ 13 ಎಕರೆ ಕಬ್ಬು ಭಸ್ಮ: ಜೆಸ್ಕಾಂ ವಿರುದ್ಧ ತೇಲ್ಕೂರ್ ಆಕ್ರೋಶ

ಕಲಬುರಗಿ: ಸೇಡಂ ತಾಲೂಕಿನ ಯಡಗಾ ಗ್ರಾಮದಲ್ಲಿ ವಿದ್ಯುತ್ ಶಾರ್ಟ್ ಸಕ್ಯೂಟ್ನಿಂದ ಕಬ್ಬಿನ ಬೆಳೆಗೆ ಬೆಂಕಿ ತಗುಲಿ ಸುಮಾರು 13 ಎಕರೆ ಪ್ರದೇಶದ ಕಬ್ಬು ಸಂಪೂರ್ಣ ಸುಟ್ಟು ಭಸ್ಮವಾಗಿದ್ದು, ರೈತರಿಗೆ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಘಟನೆಗೆ ಕಾರಣ ಎಂದು ಆರೋಪಿಸಿರುವ ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ್ ಅವರು , ಸಂತ್ರಸ್ತ ರೈತರಿಗೆ ಪ್ರತಿ ಎಕರೆಗೆ ರೂ 2 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಗುರುವಾರ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರ ತಂಡದೊಂದಿಗೆ ಸೇಡಂ ತಾಲೂಕಿನ ಯಡಗಾ ಗ್ರಾಮಕ್ಕೆ ಭೇಟಿ ನೀಡಿ, ಬೆಂಕಿಯಿಂದ ಹಾನಿಗೊಳಗಾದ ಕಬ್ಬಿನ ಹೊಲಗಳನ್ನು ಪರಿಶೀಲಿಸಿದ ಬಳಿಕ ಅವರು ಮಾತನಾಡಿ ಗ್ರಾಮದ ರೈತರಾದ ಪಾರ್ವತಿ ಕಲ್ಲಪ್ಪ ತಾಡಪಳ್ಳಿ ಅವರ ಸರ್ವೆ ನಂ. 146ರ ನಾಲ್ಕು ಎಕರೆ, ಗೌಡಪ್ಪ ತಾಡಪಳ್ಳಿ ಅವರ ಸರ್ವೆ ನಂ. 147ರ ಮೂರು ಎಕರೆ ಹಾಗೂ ಪಂಡಿತರಾವ್ ಗೌಣೋರ ಅವರ ಸರ್ವೆ ನಂ. 145/1ರ ಆರು ಎಕರೆ ಕಬ್ಬಿನ ಬೆಳೆ ಬೆಂಕಿಗೆ ಆಹುತಿಯಾಗಿದೆ. ಒಟ್ಟು 13 ಎಕರೆ ಕಬ್ಬು ಸಂಪೂರ್ಣ ನಾಶವಾಗಿದ್ದು, ರೈತರಿಗೆ ಭಾರಿ ಆರ್ಥಿಕ ನಷ್ಟ ಉಂಟಾಗಿದೆ.

ವಿದ್ಯುತ್ ಶಾರ್ಟ್ ಸಕ್ಯೂಟ್ ಗೆ ಕಾರಣರಾದ ಜೆಸ್ಕಾಂ ಅಧಿಕಾರಿಗಳ ವಿರುದ್ಧ ನಿರ್ಲಕ್ಷ್ಯದ ಹೊಣೆಗಾರಿಕೆ ನಿಗದಿಪಡಿಸಿ ಪ್ರಕರಣ ದಾಖಲಿಸಬೇಕು. ಅಲ್ಲದೆ, ಹಾನಿಗೊಳಗಾದ ರೈತರಿಗೆ ಜೆಸ್ಕಾಂ ಹಾಗೂ ಸರ್ಕಾರದಿಂದ ಪ್ರತಿ ಎಕರೆಗೆ ರೂ2 ಲಕ್ಷದಂತೆ ಪರಿಹಾರ ಕೊಡಿಸಬೇಕು ಎಂದು ತೇಲ್ಕೂರ್ ಒತ್ತಾಯಿಸಿದರು.

ಘಟನೆ ನಡೆದು 48 ಗಂಟೆಗಳು ಕಳೆದರೂ ತಹಶೀಲ್ದಾರ್ ಹಾಗೂ ಕೃಷಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರ ಸಂಕಷ್ಟ ಆಲಿಸಿಲ್ಲ. ಬೆಳೆ ಕಳೆದುಕೊಂಡ ರೈತರಿಗೆ ಸಾಂತ್ವನ ಹೇಳುವ ಕನಿಷ್ಠ ಸೌಜನ್ಯವನ್ನೂ ಅಧಿಕಾರಿಗಳು ತೋರಿಲ್ಲ. ಇದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಶಾಸಕ ಶರಣಪ್ರಕಾಶ್ ಪಾಟೀಲ್ ಅವರ ಅವಧಿಯಲ್ಲಿ ಅಧಿಕಾರಿಗಳು ರೈತರೊಂದಿಗೆ ನಡೆದುಕೊಳ್ಳುತ್ತಿರುವುದು ರೈತ ವಿರೋಧಿ ಧೋರಣೆಯಾಗಿದೆ ಎಂದು ರಾಜಕುಮಾರ ಪಾಟೀಲ್ ತೇಲ್ಕೂರ್ ಕಿಡಿಕಾರಿದರು.

ತಕ್ಷಣವೇ ತಹಶೀಲ್ದಾರ್, ಕೃಷಿ ಇಲಾಖೆ ಹಾಗೂ ಜೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಹಾನಿಯ ಕುರಿತು ಪಂಚನಾಮೆ ನಡೆಸಬೇಕು. ರೈತರಿಗೆ ಉಂಟಾದ ನಷ್ಟಕ್ಕೆ ಸೂಕ್ತ ಪರಿಹಾರ ದೊರಕಿಸಿಕೊಡಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ರೈತರ ಪರವಾಗಿ ಬಿಜೆಪಿ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

# ದರ್ಗಾ ಶಿರೂರ ಗ್ರಾಮದಲ್ಲಿ ಕ್ರಿಕೆಟ್ ತಂಡ ರಚನೆ; ಆಟಗಾರರಿಗೆ ಟಿ-ಶರ್ಟ್ ವಿತರಣೆ



ಆಳಂದ: ತಾಲೂಕಿನ ದರ್ಗಾ ಶಿರೂರ ಗ್ರಾಮದಲ್ಲಿ ಯುವಕರು ಕ್ರಿಕೆಟ್ ತಂಡವನ್ನು ರಚಿಸಿ, ಆಟಗಾರರಿಗೆ ಟಿ-ಶಗಳನ್ನು ವಿತರಿಸುವ ಮೂಲಕ ಸಂಭ್ರಮಿಸಿದರು.

ಗ್ರಾಮದ ಹೊರವಲಯದಲ್ಲಿರುವ ಬಸವೇಶ್ವರ ಅನುಭವ ಮಂಟಪದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಕ್ರಿಕೆಟ್ ತಂಡದ ಆಟಗಾರರಿಗೆ ಟಿ-ಶಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ತಂಡದ ನಾಯಕ ಶಾಂತಲಿಂಗ ಹೌಶೆಟ್ಟಿ, ಯುವಕರ ದೈಹಿಕ ಸದೃಢತೆ ಹಾಗೂ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಕ್ರೀಡೆಗಳು ಮಹತ್ವದ ಪಾತ್ರ ವಹಿಸುತ್ತವೆ. ಯುವಕರು ಮೊಬೈಲಗಳಲ್ಲಿ ಮುಳುಗಿ ಅಮೂಲ್ಯ ಸಮಯವನ್ನು ವ್ಯರ್ಥ ಮಾಡದೆ, ದೈಹಿಕ ಶ್ರಮದ ಆಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕ್ರೀಡೆಗಳು ದೇಹವನ್ನು ಸದೃಢಗೊಳಿಸುವುದರ ಜತೆಗೆ ಶಿಸ್ತು, ಒಗ್ಗಟ್ಟು ಮತ್ತು ಸಹಕಾರದ ಮನೋಭಾವವನ್ನು ಬೆಳೆಸುತ್ತವೆ ಎಂದು ಹೇಳಿದರು.

ರಜೆಯಲ್ಲಿರುವ ಸೈನಿಕ ಶಾಂತಲಿಂಗ ಘಂಟೆ ಮಾತನಾಡಿ, ಸೇನೆಗೆ ಸೇರಲು ಬಯಸುವ ಯುವಕರು ದೈಹಿಕವಾಗಿ ಸದೃಢರಾಗಿರುವುದು ಅತ್ಯಂತ ಅವಶ್ಯಕ. ದೈಹಿಕ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಕ್ರೀಡೆಗಳು ಪೂರಕವಾಗಿದ್ದು, ಯುವಕರು ಬಾಲ್ಯದಿಂದಲೇ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಶಿವಬಸವ ಪಾಟೀಲ, ರಾಚಣ್ಣ ಗೋಗಾಯಿ, ಮಲ್ಲು ಎನ್. ಘಂಟೆ, ಗುರು ಬಟ್ಟರಕಿ, ಸಂಜಯಕುಮಾರ ಮುಲಗೆ, ಭೀಮಾಶಂಕರ ಜಕಪೂರೆ ಮುಂತಾದವರು ಉಪಸ್ಥಿತರಿದ್ದರು. ಶಿವಲಿಂಗಪ್ಪ ಮಂಟಗಿ ನಿರೂಪಿಸಿದರು

# ಪತ್ರಕರ್ತರ ಮೇಲೆ ಪೊಲೀಸ್ ಅಧಿಕಾರಿಗಳ ದರ್ಪ: ಅಮಾನವೀಯ ನಡೆಗೆ ಮಲ್ಲಪ್ಪ ಸಂಕೀನ್ ಆಕ್ರೋಶ



ಯಾದಗಿರಿ: ಮೈಸೂರಿನ ವಿಶ್ವವಿಖ್ಯಾತ ದಸರಾ ಮಹೋತ್ಸವದ ವಿಜಯದಶಮಿ ಜಂಬೂ ಸವಾರಿ ಮೆರವಣಿಗೆಯ ಸಂದರ್ಭದಲ್ಲಿ ವರದಿಗಾರಿಕೆಗೆ ತೆರಳಿದ್ದ ಪತ್ರಕರ್ತರೊಂದಿಗೆ ಅನುಚಿತವಾಗಿ ವರ್ತಿಸಿ, ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಪೊಲೀಸ್ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತು ಮಾಡಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಿಲ್ಲಾಡಳಿತ ಅಧಿಕೃತವಾಗಿ ಮೀಡಿಯಾ ಪಾಸ್ ನೀಡಿದ್ದರೂ, ವಿಜಯದಶಮಿ ದಿನದಂದು ಜಂಬೂ ಸವಾರಿ ಮೆರವಣಿಗೆಯನ್ನು ವರದಿ ಮಾಡಲು ಅರಮನೆ ಆವರಣದೊಳಗೆ ಪ್ರವೇಶಿಸಲು ಪೊಲೀಸ್ ಅಧಿಕಾರಿಗಳು ನಿರಾಕರಿಸಿರುವುದು ಖಂಡನೀಯ ಎಂದು ತಿಳಿಸಿದ್ದಾರೆ.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ವೈಭವ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮೆರವಣಿಗೆಯ ದೃಶ್ಯಗಳನ್ನು ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ ಪತ್ರಕರ್ತರು ತಮ್ಮ ಕರ್ತವ್ಯ ನಿರ್ವಹಿಸಲು ಮುಂದಾಗಿದ್ದರು. ಆದರೆ, ಈ ಸಂದರ್ಭದಲ್ಲಿ ಪೊಲೀಸರು ವಿನಾಕಾರಣ ಅಡ್ಡಿಪಡಿಸಿರುವುದು ಪತ್ರಿಕಾ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರುವ ಬೆಳವಣಿಗೆಯಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಟ್ರಾವೆಲ್ಮೆಡ್ ನೋಡಿ

ಪತ್ರಕರ್ತರೊಂದಿಗೆ ಪೊಲೀಸ್ ಅಧಿಕಾರಿಗಳು ಅನುಚಿತವಾಗಿ ವರ್ತಿಸಿರುವುದು ಆಘಾತಕಾರಿ ಸಂಗತಿಯಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳೇ ಮಾಧ್ಯಮ ಪ್ರತಿನಿಧಿಗಳೊಂದಿಗೆ ಈ ರೀತಿಯಾಗಿ ನಡೆದುಕೊಂಡರೆ, ಸಾಮಾನ್ಯ ಜನರೊಂದಿಗೆ ಅವರ ವರ್ತನೆ ಹೇಗಿರಬಹುದು ಎಂಬ ಪ್ರಶ್ನೆ ಮೂಡುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತವೇ ಅಧಿಕೃತವಾಗಿ ನೀಡಿದ ಮೀಡಿಯಾ ಪಾಗಳಿಗೆ ಸೂಕ್ತ ಗೌರವ ನೀಡದೆ, ಪತ್ರಕರ್ತರ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದು ಗಂಭೀರ ವಿಚಾರವಾಗಿದೆ. ಮಾಧ್ಯಮಗಳು ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದು ಹೇಳುವುದಷ್ಟೇ ಸಾಲದು; ಪತ್ರಕರ್ತರು ಯಾವುದೇ ಭಯ, ಒತ್ತಡ ಅಥವಾ ಅಡ್ಡಿಯಿಲ್ಲದೆ ಕಾರ್ಯನಿರ್ವಹಿಸಲು ಅಗತ್ಯವಾದ ವಾತಾವರಣವನ್ನು ಸರ್ಕಾರ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಪ್ರಕರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರು ಗಂಭೀರವಾಗಿ ಪರಿಗಣಿಸಿ, ಘಟನೆಗೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಬೇಕು. ತಪ್ಪಿತಸ್ಥರೆಂದು ಕಂಡುಬರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನುಬದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಮಲ್ಲಪ್ಪ ಸಂಕೀನ್ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಪತ್ರಕರ್ತರ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸುವ ಘಟನೆಗಳು ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪತ್ರಕರ್ತರ ಹಕ್ಕುಗಳು ಹಾಗೂ ಮಾಧ್ಯಮ ಸ್ವಾತಂತ್ರ್ಯವನ್ನು ರಕ್ಷಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

# ಪೊಲೀಸ್ ಹುತಾತ್ಮರ ತ್ಯಾಗ, ಕರ್ತವ್ಯನಿಷ್ಠೆ ಸಮಾಜಕ್ಕೆ ಸದಾ ಪ್ರೇರಣೆ



ಗದಗ: ಪೊಲೀಸ್ ಹುತಾತ್ಮರ ತ್ಯಾಗ, ದೇಶಪ್ರೇಮ ಮತ್ತು ಕರ್ತವ್ಯನಿಷ್ಠೆ ಪ್ರತಿಯೊಬ್ಬರಿಗೂ ಪ್ರೇರಣೆಯಾಗಬೇಕು. ಹುತಾತ್ಮರ ಸ್ಮರಣೆ ಎಂದರೆ ಅವರ ಹೆಸರುಗಳನ್ನು ನೆನಪಿಸಿಕೊಳ್ಳುವುದಷ್ಟೇ ಅಲ್ಲ, ಅವರು ಪಾಲಿಸಿದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಾಗಿದೆ ಎಂದು ಗದಗ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಗಂಗಾಧರ ಸಿ.ಎಂ. ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಗದಗ ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಆಯೋಜಿಸಿದ್ದ ಪೊಲೀಸ್ ಹುತಾತ್ಮರ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

1959ರ ಅಕ್ಟೋಬರ್ 21ರಂದು ಲಡಾಖ್‌ನ ಹಾಟ್ ಸ್ಪ್ರಿಂಗ್ಸ್ ಪ್ರದೇಶದಲ್ಲಿ ಚೀನಾದ ಸಶಸ್ತ್ರ ಪಡೆಗಳ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ 10 ಯೋಧರು ಪ್ರಾಣಾರ್ಪಣೆ ಮಾಡಿದರು. ಅವರ ತ್ಯಾಗದ ಸ್ಮರಣಾರ್ಥವಾಗಿ ಪ್ರತಿ ವರ್ಷ ಅಕ್ಟೋಬರ್ 21ರಂದು ಪೊಲೀಸ್ ಹುತಾತ್ಮರ ದಿನವನ್ನು ಆಚರಿಸಲಾಗುತ್ತದೆ. ದೇಶದ ರಕ್ಷಣೆ ಹಾಗೂ ಸಾರ್ವಜನಿಕರ ಸುರಕ್ಷತೆಗಾಗಿ ಪ್ರಾಣತ್ಯಾಗ ಮಾಡಿದ ಎಲ್ಲ ಪೊಲೀಸ್ ಸಿಬ್ಬಂದಿಯ ಸೇವೆಯನ್ನು ಸ್ಮರಿಸುವುದು ಈ ದಿನದ ಉದ್ದೇಶವಾಗಿದೆ ಎಂದರು.

**ಹುತಾತ್ಮರ ಕುಟುಂಬಗಳ ತ್ಯಾಗವೂ ಸ್ಮರಣೀಯ:**

ಕರ್ತವ್ಯ ನಿರ್ವಹಿಸುವಾಗ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬ ಪೊಲೀಸ್ ಅಧಿಕಾರಿ, ಸಿಬ್ಬಂದಿಯ ಹಿಂದೆ ನೋವು ಮತ್ತು ತ್ಯಾಗದಿಂದ ಕೂಡಿದ ಕುಟುಂಬವಿರುತ್ತದೆ. ಮಗನನ್ನು ಕಳೆದುಕೊಂಡ ತಾಯಿ, ಪತಿಯನ್ನು ಕಳೆದುಕೊಂಡ ಪತ್ನಿ ಹಾಗೂ ತಂದೆಯ ಪ್ರೀತಿಯಿಂದ ವಂಚಿತರಾದ ಮಕ್ಕಳು ಅನುಭವಿಸುವ ನೋವು ಅಪಾರ. ದೇಶಕ್ಕಾಗಿ ತಮ್ಮ ಕುಟುಂಬದ ಸಂತೋಷವನ್ನೇ ತ್ಯಾಗ ಮಾಡಿದ ಈ ಕುಟುಂಬಗಳ ಸಹನಶಕ್ತಿಯನ್ನು ಸಮಾಜ ಗೌರವಿಸಬೇಕು. ಹುತಾತ್ಮರ ಕುಟುಂಬಗಳು ಒಂಟಿಯಲ್ಲ; ಅವರ ಜವಾಬ್ದಾರಿ ಇಡೀ ದೇಶದ್ದಾಗಿದೆ ಎಂದು ಹೇಳಿದರು.

ಪೊಲೀಸ್ ಸಿಬ್ಬಂದಿಗೂ ಕುಟುಂಬದೊಂದಿಗೆ ಹಬ್ಬಗಳನ್ನು ಆಚರಿಸುವ, ಮಕ್ಕಳೊಂದಿಗೆ ಸಮಯ ಕಳೆಯುವ ಆಸೆಗಳಿರುತ್ತವೆ. ಆದರೆ, ಸಮಾಜದ ಸುರಕ್ಷತೆಯನ್ನು ತಮ್ಮ ಹೊಣೆಗಾರಿಕೆಯೆಂದು ಭಾವಿಸಿ ಅನೇಕರು ವೈಯಕ್ತಿಕ ಸಂತೋಷವನ್ನು ತ್ಯಾಗ ಮಾಡುತ್ತಾರೆ. ಜನರು ನೆಮ್ಮದಿಯಿಂದ ನಿದ್ರಿಸುವಾಗ ಪೊಲೀಸರು ರಾತ್ರಿ ಗಸ್ತು ತಿರುಗುತ್ತಿರುತ್ತಾರೆ. ಹೀಗಾಗಿ ಪೊಲೀಸ್ ಸಮವಸ್ತ್ರವು ಕೇವಲ ಬಟ್ಟೆಯಲ್ಲ; ಅದು ಶಿಸ್ತು, ಧೈರ್ಯ, ಜವಾಬ್ದಾರಿ ಮತ್ತು ಜನರ ವಿಶ್ವಾಸದ ಸಂಕೇತವಾಗಿದೆ ಎಂದರು.

**ಪೊಲೀಸ್-ಸಾರ್ವಜನಿಕರ ಸಹಕಾರ ಮುಖ್ಯ:**

ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವುದು ಪೊಲೀಸ್ ಇಲಾಖೆಯ ಪ್ರಮುಖ ಜವಾಬ್ದಾರಿಯಾದರೂ, ಅದಕ್ಕೆ ಸಾರ್ವಜನಿಕರ ಸಹಕಾರವೂ ಅಗತ್ಯವಾಗಿದೆ. ಪ್ರತಿಯೊಬ್ಬ ನಾಗರಿಕರೂ ಕಾನೂನು ಪಾಲಿಸಬೇಕು, ರಸ್ತೆ ಸುರಕ್ಷತಾ ನಿಯಮಗಳನ್ನು ಅನುಸರಿಸಬೇಕು ಹಾಗೂ ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು ಮತ್ತು ದುರ್ಬಲ ವರ್ಗಗಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಪೊಲೀಸರು ಮತ್ತು ಸಾರ್ವಜನಿಕರ ನಡುವೆ ವಿಶ್ವಾಸ ಹಾಗೂ ಸಹಕಾರ ಬೆಳೆದಾಗ ಅಪರಾಧ ನಿಯಂತ್ರಣ ಮತ್ತು ಸುರಕ್ಷಿತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸೈಬರ್ ಅಪರಾಧಗಳು, ಆನ್‌ಲೈನ್ ವಂಚನೆಗಳು, ಮಾದಕ ವಸ್ತುಗಳ ಅಕ್ರಮ ಸಾಗಾಟ, ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳು ಹಾಗೂ ಸಂಘಟಿತ ಅಪರಾಧಗಳು ಇಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಗೆ ಹೊಸ ಸವಾಲುಗಳಾಗಿವೆ. ಇವುಗಳನ್ನು ಎದುರಿಸಲು ಆಧುನಿಕ ತಂತ್ರಜ್ಞಾನದ ಬಳಕೆ, ನಿರಂತರ ತರಬೇತಿ ಮತ್ತು ತನಿಖಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವಾಗಿದೆ ಎಂದರು.

**ಪೊಲೀಸರ ಸುರಕ್ಷತೆ ಮತ್ತು ಆರೋಗ್ಯಕ್ಕೂ ಆದ್ಯತೆ ನೀಡಬೇಕು:**

ಪೊಲೀಸ್ ಸಿಬ್ಬಂದಿಯ ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯವಾಗಿದೆ. ಕರ್ತವ್ಯದ ಒತ್ತಡವನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಅಗತ್ಯ ವಿಶ್ರಾಂತಿ, ಸೂಕ್ತ ತರಬೇತಿ, ಸಂಪನ್ಮೂಲಗಳು ಹಾಗೂ ಕುಟುಂಬದೊಂದಿಗೆ ಸಮಯ ಕಳೆಯುವ ಅವಕಾಶ ಕಲ್ಪಿಸಬೇಕು. ಕರ್ತವ್ಯಕ್ಕೆ ತೆರಳುವ ಪ್ರತಿಯೊಬ್ಬ ಪೊಲೀಸ್ ಸಿಬ್ಬಂದಿಯೂ ಸುರಕ್ಷಿತವಾಗಿ ಮನೆಗೆ ಮರಳಬೇಕು ಎಂಬುದು ಅವರ ಕುಟುಂಬದಷ್ಟೇ ಸಮಾಜದ ಆಶಯವೂ ಆಗಿರಬೇಕು ಎಂದು ಹೇಳಿದರು.

ಪೊಲೀಸ್ ಹುತಾತ್ಮರ ಸ್ಮರಣೆಯು ಅವರ ತ್ಯಾಗವನ್ನು ಗೌರವಿಸುವುದರ ಜೊತೆಗೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಸುರಕ್ಷತೆ ಮತ್ತು ಕಲ್ಯಾಣದ ಬಗ್ಗೆಯೂ ಕಾಳಜಿ ವಹಿಸಬೇಕೆಂಬ ಸಂದೇಶ ನೀಡುತ್ತದೆ ಎಂದರು.

ಯುವಜನರಲ್ಲಿ ದೇಶಪ್ರೇಮ ಮತ್ತು ಸೇವಾ ಮನೋಭಾವ ಬೆಳೆಸಬೇಕು:

ಯುವಜನರಲ್ಲಿ ಶಿಸ್ತು, ಧೈರ್ಯ, ಕರ್ತವ್ಯನಿಷ್ಠೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವುದು ಅಗತ್ಯವಾಗಿದೆ. ಪೊಲೀಸ್ ಹುತಾತ್ಮರ ಜೀವನವು ಸಂಕಷ್ಟಗಳನ್ನು ಧೈರ್ಯದಿಂದ ಎದುರಿಸುವುದು, ವಹಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದು ಹಾಗೂ ಸಮಾಜದ ಒಳಿತಿಗಾಗಿ ಸೇವೆ ಸಲ್ಲಿಸುವುದನ್ನು ಕಲಿಸುತ್ತದೆ. ದೇಶಪ್ರೇಮವೆಂದರೆ ಕೇವಲ ಘೋಷಣೆಗಳನ್ನು ಕೂಗುವುದಲ್ಲ; ನಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದೂ ದೇಶಸೇವೆಯಾಗಿದೆ ಎಂದು ಹೇಳಿದರು.

ಹುತಾತ್ಮರ ದಿನವು ಕೇವಲ ಶೋಕಾಚರಣೆಯಾಗದೆ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದ ದಿನವಾಗಬೇಕು. ವೀರನ ದೇಹ ಮಣ್ಣಿನಲ್ಲಿ ಮಣ್ಣಾಗಬಹುದು, ಆದರೆ ಆತನ ತ್ಯಾಗದ ಕಥೆ ಎಂದಿಗೂ ಮರೆಯಾಗುವುದಿಲ್ಲ. ಹುತಾತ್ಮನ ಉಸಿರು ನಿಂತರೂ ಆತನ ದೇಶಪ್ರೇಮ ಲಕ್ಷಾಂತರ ಹೃದಯಗಳಲ್ಲಿ ಜೀವಂತವಾಗಿರುತ್ತದೆ ಎಂದು ಭಾವುಕರಾಗಿ ನುಡಿದರು.

ಕಾರ್ಯಕ್ರಮದಲ್ಲಿ ದೇಶದ ರಕ್ಷಣೆ ಹಾಗೂ ಸಾರ್ವಜನಿಕರ ಸುರಕ್ಷತೆಗಾಗಿ ಪ್ರಾಣತ್ಯಾಗ ಮಾಡಿದ ಎಲ್ಲ ಪೊಲೀಸ್ ಹುತಾತ್ಮರಿಗೆ ಮತ್ತು ಅವರ ಕುಟುಂಬಗಳಿಗೆ ಪುಷ್ಪ, ಗೌರವಪೂರ್ವಕ ನಮನ ಸಲ್ಲಿಸಲಾಯಿತು.

ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಿಥುನ್ ಎಚ್. ಎನ್. ಅವರು ಉಪಸ್ಥಿತಿಯಲ್ಲಿ ಅರ್ಥ ಪೂರ್ಣವಾಗಿ ಹುತಾತ್ಮರ ದಿನಾಚರಣೆ ಜರುಗಿತು. ಹುತಾತ್ಮ ಪೋಲಿಸರ ಹೆಸರುಗಳನ್ನು ಹೇಳಿ ಅವರಿಗೆ 2 ನಿಮಿಷ ಮೌನಾಚರಣೆ ಸಲ್ಲಿಸಲಾಯಿತು. ಇದೇ ವೇಳೆ ಹುತಾತ್ಮರಿಗೆ ಅತಿಥಿಗಳು ಹಾಗೂ ಸಮಾಜದ ವಿವಿಧ ಕ್ಷೇತ್ರಗಳ ಗಣ್ಯರು ಪುಷ್ಪನಮನ ಸಲ್ಲಿಸಿದರು.

ಡಿ ವೈ ಎಸ್ ಪಿ ಗಳಾದ ಮಹಾಂತೇಶ್ ಸಜ್ಜನ, ಮುರ್ತುಜಾ ಖಾದ್ರಿ, ಪ್ರಭುಗೌಡ ಸೇರಿದಂತೆ ಇನ್ನಿತರ ಪೊಲೀಸ್ ಅಧಿಕಾರಿಗಳು ಸಿಬ್ಬಂದಿಗಳು ಇದ್ದರು. ಪರೆಡ್ ಕಮಾಂಡರ್ ಡಿಎಆರ್ ಆರ್ ಪಿ ಐ ಶಂಕರಗೌಡ ಪಾಟೀಲ ಅವರು ಕವಾಯತು ನಡೆಸಿಕೊಟ್ಟರು.

# ಎ.ಎಸ್.ಪಾಟೀಲ ಕಾಲೇಜ್ ಎಂ.ಬಿ.ಎ ವಿಭಾಗಕ್ಕೆ ಅತ್ಯುತ್ತಮ ರ‍್ಯಾಂಕ್



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಿ.ಎಲ್.ಡಿ.ಇ ಸಂಸ್ಥೆಯ ಎ. ಎಸ್. ಪಾಟೀಲ ಕಾಮರ್ಸ್ (ಸ್ವಾಯತ್ತ) ಕಾಲೇಜಿನ ಎಂ.ಬಿ.ಎ ವಿಭಾಗವು ಭಾರತದ ಖ್ಯಾತ ನಿಯತಕಾಲಿಕ ಔಟಲುಕ್–ಐಕೇರ್ ನಡೆಸಿದ ಸಮೀಕ್ಷೆಯಲ್ಲಿ ಅತ್ಯುತ್ತಮ ರ‍್ಯಾಂಕ್ ಪಡೆದಿದೆ.

ರಾಜ್ಯದ ಪ್ರತಿಷ್ಠಿತ 32 ಕಾಲೇಜುಗಳಲ್ಲಿ 15ನೇ ಸ್ಥಾನ ಮತ್ತು ಭಾರತದ ಖ್ಯಾತ 200 ಕಾಲೇಜುಗಳಲ್ಲಿ 70ನೇ ರ‍್ಯಾಂಕ್ ಪಡೆದಿದೆ. ಅಲ್ಲದೇ, ರಾಜ್ಯದ ಮಾನ್ಯತೆ ಪಡೆದ ಕಾಲೇಜುಗಳ ವಿಭಾಗದಲ್ಲಿ ಪ್ರತಿಷ್ಠಿತ 14 ಕಾಲೇಜುಗಳಲ್ಲಿ 3ನೇ ಹಾಗೂ ದೇಶದ 96 ಕಾಲೇಜುಗಳಲ್ಲಿ 13ನೇ ರ‍್ಯಾಂಕ್ (Rank) ಪಡೆದಿದೆ.

ದಕ್ಷಿಣ ಭಾರತ ವಿಭಾಗದಲ್ಲಿ ಪ್ರತಿಷ್ಠಿತ 72 ಕಾಲೇಗಳಲ್ಲಿ 28ನೇ ಸ್ಥಾನ ಪಡೆಯುವ ಮೂಲಕ ಗಮನ ಸೆಳೆದಿದೆ.

ಕಾಲೇಜಿನ ಶೈಕ್ಷಣಿಕ ಗುಣಮಟ್ಟ, ಅತ್ಯುತ್ತಮ ಬೋಧನೆ ಮತ್ತು ಕಲಿಕೆ, ಸಂಶೋಧನೆ ಹಾಗೂ ನಾವೀನ್ಯತೆ, ಆಧುನಿಕ ಮೂಲಸೌಕರ್ಯ ಹಾಗೂ ವಿದ್ಯಾರ್ಥಿ–ಕೇಂದ್ರಿತ ಶಿಕ್ಷಣದತ್ತ ಇರುವ ಬದ್ಧತೆಯನ್ನು ಪರಿಗಣಿಸಿ ಈ ರ‍್ಯಾಂಕ್ (Rank) ನೀಡಲಾಗಿದೆ.

ಬಿ. ಎಲ್. ಡಿ. ಇ ಎಂ.ಬಿ.ಎ ಕಾಲಡಜಿನ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಹಾಗೂ ಕೈಗಾ–ರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಬಿ. ಪಾಟೀಲ ಅವರು ಸಂತಸ ವ್ಯಕ್ತಪಡಿಸಿದ್ದು, ಈ ಸಾಧನೆಗೆ ಕಾರಣರಾದ ಆಡಳಿತಾಧಿಕಾರಿಗಳು, ಪ್ರಾಚಾರ್ಯರು, ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ ಗಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ಸ್ವಾಭಿಮಾನ–ಶೌರ್ಯದ ಸಂಕೇತ ರಾಣಿ ಚೆನ್ನಮ್ಮ



■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ಪಟ್ಟಣದ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಶಾಲೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕ ತಿಕೋಟಾ ಸಂಂ–ಯುಕ್ತಾಶ್ರಯದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮನ 148ನೇ ಜಯಂತಿಯನ್ನು ಅದ್ದೂರಿಯಾಗಿ ಆಚ–ರಿಸಲಾಯಿತು.

ಕಿತ್ತೂರು ಚೆನ್ನಮ್ಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಹೊನವಾಡದ ಖ್ಯಾತ ಪ್ರವಚನಕಾರ ಬಾಬುರಾವ್ ಮಹಾರಾಜರು ಮಾತನಾಡಿ, ಕಿತ್ತೂರು ರಾಣಿ ಚೆನ್ನಮ್ಮನವರ ಆದರ್ಶ ನಮಗೆಲ್ಲ ಮಾದರಿ ಎಂದು ಅಭಿಪ್ರಾಯಪಟ್ಟರು.

ತಿಕೋಟಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿದ್ರಾಮಯ್ಯ ಲಕ್ಕುಂಡಿಮಠ ಮಾತನಾಡಿ, ಚೆನ್ನಮ್ಮನ ಜಯಂತಿಯನ್ನು ವಿಜಯೋತ್ಸವದ ದಿನವನ್ನಾಗಿ ಆಚರಿಸುತ್ತಿರುವುದು ಯುವ ಜನತೆಯಲ್ಲಿ ಧೈರ್ಯ ಸಾಹಸ ಮತ್ತು ರಾಷ್ಟ್ರಪ್ರೇಮವನ್ನು ತುಂಬಿದ ಸಂಕೇತವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಎಂ ಕೆ ಬಗಲಿ ಮಾತನಾಡಿದರು.

ಮಾಜಿ ಗ್ರಾಪಂ ಅಧ್ಯಕ್ಷ ಸದಾಶಿವ ಪೂಜಾರಿ, ಪ್ರಭು ಅವಟಿ, ನಿಕಟ ಪೂರ್ವ ಅಧ್ಯಕ್ಷ ಸೋಮಶೇಖರ ಜತ್ತಿ, ಸದಾಶಿವ ಮಂಗಸೂಳಿ, ಗುಂಡು ನಾವಿ, ವಿದ್ಯಾ ಸವನಹಳ್ಳಿ, ಬಿ ಜಿ ವಿಭೂತಿ, ಗೀತಾ ಕುಲಕರ್ಣಿ, ಆರ್ ಕೆ ಬಿಸ್ನಾಳ್, ಎಂ ಆರ್ ಕುಡವಕ್ಕಲಿಗ, ಅನಿಲ್ ಪೂಜಾರಿ, ಆಲ್ಗೂರ ಗುರು ಮಾತೆ, ಸಣ್ಣಕ್ಕ ಗುರುಮಾತೆ, ಸುನೀತಾ ಭಜಂತ್ರಿ ಭಾಗವಹಿಸಿದ್ದರು.

ಬಿ ಕೆ ಬಿರಾದಾರ ನಿರೂಪಿಸಿದರು. ಸುರೇಶ ಚಾವರ ಸ್ವಾಗತಿಸಿದರು. ಎಲ್ ಡಿ ಜಮಾದಾರ್ ವಂದಿಸಿದರು.

# ಜಾಲಗೇರಿಯ ಇಬ್ಬರು ಶಿಕ್ಷಕಿಯರಿಗೆ 'ಅತ್ಯುತ್ತಮ ಶಿಕ್ಷಕಿ' ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ





ವಿಜಯಪುರ: ತಿಕೋಟಾ ತಾಲೂಕಿನ ಜಾಲಗೇರಿ ಗ್ರಾಮದ ಶ್ರೀ ಅಮೋಘಸಿದ್ದೇಶ್ವರ ಪ್ರೌಢ ಶಾಲೆಯ ಇಬ್ಬರು ಶಿಕ್ಷಕಿಯರಿಗೆ ಕನ್ನಡ ರಾಜ್ಯೋತ್ಸವ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕನ್ನಡ. ನಾಡು, ನುಡಿ, ನೆಲ, ಜಲ, ಸಾಂಸ್ಕೃತಿಕ, ಸಾಹಿತ್ಯ, ಸಾಮಾಜಿಕ ಸಂಶೋಧನೆ, ಶಿಕ್ಷಣ, ಕೃಷಿ, ಯೋಗ, ಪತ್ರಿಕೋದ್ಯಮ, ವೈದ್ಯಕೀಯ, ನೃತ್ಯ, ಕಲಾ ಮತ್ತು ನಾಟಕ ಸಿನಿಮಾ ಕ್ಷೇತ್ರದಲ್ಲಿ ಅನುಪಮ ಗಣನೀಯವಾದ ಸೇವೆಯನ್ನು ಗುರುತಿಸಿ ಕಡಲಬಾಳು ಶ್ರೀ ಸುಜ್ಞಾನ ವಿದ್ಯಾಪೀಠ ಮತ್ತು ಸಾಂಸ್ಕೃತಿಕ ರಂಗಕಲಾವಿದರ ಸಾಧಕರ ಶ್ರೀ ಪ್ರಕಾಶನ(ರಿ) ಕರ್ನಾಟಕ ಕೊಡಮಾಡಲ್ಪಡುವ ಈ ಪ್ರಶಸ್ತಿಗೆ ಶ್ರೀಮತಿ ಲಕ್ಷ್ಮಿ ಮಲ್ಲಿಕಾರ್ಜುನ ಝಳಕಿ(ವಿಜ್ಞಾನ) ಹಾಗೂ ಶ್ರೀಮತಿ ಶೈಲಶ್ರೀ ಬಸನಗೌಡ ಪಾಟೀಲ(ಇಂಗ್ಲೀಷ್) ಶಿಕ್ಷಕಿಯರು ಆಯ್ಕೆಯಾಗಿದ್ದಾರೆ.

# ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಅಪ್ಸರಾ ಬೇಗಂ ನೇಮಕ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲಾ ಜನತಾದಳ (ಜಾತ್ಯತೀತ) ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಶ್ರೀಮತಿ ಅಪ್ಸರಾ ಬೇಗಂ ಚಪ್ಪರಬಂದ ಅವರನ್ನು ನೇಮಕ ಮಾಡಲಾಗಿದೆ.

ಜೆಡಿಎಸ್ ಪಕ್ಷದ ರಾಜ್ಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ, ವಿಜಯಪುರ ಜಿಲ್ಲಾಧ್ಯಕ್ಷರಾದ ಮಲ್ಲಿಕಾರ್ಜುನ ಯಂಡಿಗೇರಿ ಹಾಗೂ ದೇವರಹಿಪ್ಪರಗಿ ವಿಧಾನಸಭಾ ಕ್ಷೇತ್ರದ ಶಾಸಕ ಭೀಮನಗೌಡ (ರಾಜುಗೌಡ) ಪಾಟೀಲ್ ಅವರ ಶಿಫಾರಸ್ಸಿನ ಮೇರೆಗೆ ಈ ನೇಮಕಾತಿ ಮಾಡಲಾಗಿದೆ ಎಂದು ರಾಜ್ಯ ಮಹಿಳಾ ವಿಭಾಗದ ರಾಜ್ಯಾಧ್ಯಕ್ಷೆ ರಶ್ಮಿ ರಾಮೇಗೌಡ ಅವರು ನೇಮಕಾತಿ ಆದೇಶದಲ್ಲಿ ತಿಳಿಸಿದ್ದಾರೆ.

ಅಪ್ಸರಾ ಚಪ್ಪರಾಬೇಗಂ ಚಪ್ಪರಬಂದ ಅವರು ಈಗಾಗಲೇ ಜಿಪಂ ಸದಸ್ಯರಾಗಿ ಹಾಗೂ ಜಿಪಂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆಗಳನ್ನು ಪರಿಗಣಿಸಿ ಈ ಹುದ್ದೆಯನ್ನು ನೀಡಲಾಗಿದೆ.

ಜಿಲ್ಲೆಯಲ್ಲಿ ಜೆಡಿಎಸ್ ಮಹಿಳಾ ಘಟಕವನ್ನು ಸಂಘಟಿಸಿ ಬಲಪಡಿಸುವುದು, ಪಕ್ಷದ ತತ್ವ ಹಾಗೂ ಸಿದ್ಧಾಂತಗಳಿಗೆ ಬದ್ಧರಾಗಿ ಕಾರ್ಯನಿರ್ವಹಿಸುವುದು ಮತ್ತು ವಿವಿಧ ಸಮುದಾಯಗಳ ಮಹಿಳಾ ಮುಖಂಡರು ಹಾಗೂ ಕಾರ್ಯಕರ್ತೆಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷದ ಸಂಘಟನೆಯನ್ನು ಪರಿಣಾಮಕಾರಿಯಾಗಿ ಬೆಳೆಸುವ ಜವಾಬ್ದಾರಿಯನ್ನು ನೂತನ ಅಧ್ಯಕ್ಷರಿಗೆ ವಹಿಸಲಾಗಿದೆ.

# ಪ್ರಜಾಸೇವೆ ಸದುಪಯೋಗಪಡಿಸಿಕೊಳ್ಳಿ :ಶಾಸಕ ಪಾಟೀಲ

## ಭತಗುಣಕಿಯಲ್ಲಿ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ । 100ಕ್ಕೂ ಹೆಚ್ಚು ಫಲಾನುಭವಿಗಳಿಗೆ ಪಿಂಚಣಿ ಆದೇಶ ವಿತರಣೆ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಸರ್ಕಾರದ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳು ಸದುಪಯೋಗಪಡಿಸಿಕೊಳ್ಳಬೇಕು. ಜನರು ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಅವರ ಮನೆ ಬಾಗಿಲಿಗೆ ಸೇವೆ ಒದಗಿಸುವ ಉದ್ದೇಶದಿಂದ ಪ್ರಜಾಸೇವೆ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಸಮೀಪದ ಭತಗುಣಕಿ ಗ್ರಾಮದ ಜೈ ಅಂಬಾ ಭವಾನಿ ದೇವಸ್ಥಾನದ ಆವರಣದಲ್ಲಿ ತಾಲೂಕು ಆಡಳಿತ, ಇಂಡಿ ವತಿಯಿಂದ ಆಯೋಜಿಸಿದ್ದ ಹೋಬಳಿ ಮಟ್ಟದ 'ಪ್ರಜಾಸೇವೆ ಆಂದೋಲನ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಜನಪರ ಯೋಜನೆಗಳ ಪ್ರಯೋಜನ ಅರ್ಹ–ರಿಗೆ ತಲುಪಬೇಕು. ಸಾರ್ವಜನಿಕರ ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ಬಾಕಿ ಉಳಿದಿರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಯಿತು.

ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿ ಆದ–ೇಶಗಳನ್ನು ವಿತರಿಸಲಾಯಿತು. ಸಾರ್ವಜನಿಕರಿಂದ ವಿವಿಧ ಅಹವಾಲುಗಳನ್ನು ಸ್ವೀಕರಿಸಿ, ಅವುಗಳ ಪರಿಹಾರಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿ ನಾಗೇಂದ್ರ ಕೊಳಶೆಟ್ಟಿ, ಭೀಮಣ್ಣ ಕೌಲಗಿ, ಪ್ರಶಾಂತ ಕಾಳೆ, ಕೃಷಿ ಅಧಿಕಾರಿ ಮಹಾದೇವ ಏವೂರ, ಶಿವಯೋಗಪ್ಪ ಚನ್ನಗುಂಡ, ಬಿ.ಸಿ. ಸಾಹುಕಾರ, ಎಸ್‌ಒಎಲ್ ಇಂಡಿ, ಶಾಹಾಜಿ ಮಿಸಾಳೆ, ಶಿವಪುತ್ರ ಜೇವರಗಿ, ಸದಾಶಿವ ಪ್ಯಾಟಿ, ರಾಜುಗೌಡ ಪಾಟೀಲ, ರುಕ್ಮುದ್ದೀನ್ ತದ್ದೇವಾಡಿ, ಶಾಹು ಸಿಂದೆ ಹಾಗೂ ಝಳಕಿ ಪೊಲೀಸ್ ಠಾಣೆಯ ಪಿಎಸ್ಐ ಮಂಜುನಾಥ ತೀರಕನ್ನವರ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತ–ರಿದ್ದರು.



## ಬರಗಾಲದಲ್ಲಿ ನೀರಿನ ಮಿತ ಬಳಕೆ ಅಗತ್ಯ

ಪ್ರಸ್ತುತ ವರ್ಷ ತೀವ್ರ ಬರಗಾಲದ ಪರಿಸ್ಥಿತಿ ಎದುರಾಗಿದ್ದು, ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಸಾಧ್ಯತೆಯಿದೆ. ಹೀಗಾಗಿ ಪ್ರತಿಯೊಬ್ಬರೂ ಕುಡಿಯುವ ನೀರನ್ನು ಅಮೂಲ್ಯ ಸಂಪತ್ತಿನಂತೆ ಮಿತವಾಗಿ ಬಳಸಬೇಕು. ಪ್ರತಿ ಗ್ರಾಮದಲ್ಲಿಯೂ ಕೆರೆ ನಿರ್ಮಿಸುವ ಯೋಜನೆಗೆ ನಮ್ಮ ಸರ್ಕಾರ ಮುಂದಾಗಿದೆ. ಈ ಯೋಜನೆಯಿಂದ ಅಂತರ್ಜಲ ವೃದ್ಧಿ ಹಾಗೂ ರೈತರಿಗೆ ಅನುಕೂಲವಾಗುವ ನಿರೀಕ್ಷೆಯಿದೆ. ಬರಗಾಲದ ಹಿನ್ನೆಲೆಯಲ್ಲಿ ರೈತರು ಜಾಗೃತಿಯಿಂದ ಇರಬೇಕು ಮತ್ತು ಲಭ್ಯವಿರುವ ನೀರನ್ನು ಮಿತವಾಗಿ ಬಳಸಬೇಕು ಎಂದು ಶಾಸಕ ಪಾಟೀಲ ಸಲಹೆ ನೀಡಿದರು.

# ಯುವಜನತೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿ : ಖಾಜಾಅಮೀನ

## ನೂತನವಾಗಿ ಆಯ್ಕೆಯಾದ ಈದ್ಗಾ ಕಮೀಟಿ ಸದಸ್ಯರುಗಳಿಗೆ ಸನ್ಮಾನ ಕಾರ್ಯಕ್ರಮ

■ ಉದಯರಶ್ಮಿ ದಿನಪತ್ರಿಕೆ



ಕಲಕೇರಿ: ನೀವು ಸಮಾಜಕ್ಕೆ ಒಳಿತು ಮಾಡಿದರೆ ದೇವರು ನಿಮ್ಮನ್ನು ಮೆಚ್ಚುತಾನೆ ಆದ್ದರಿಂದ ದೇವರಲ್ಲಿ ನಂಬಿಕೆಯಿರಿಸಿ ಸಮಾಜಮುಖಿ ಕಾರ್ಯಗಳಲ್ಲಿ ಯುವಜನತೆ ಮುನ್ನಡೆಯಬೇಕು ಎಂದು ನಿವೃತ್ತ ಶಿಕ್ಷಕ ಖಾಜಾಅಮೀನ ವಲ್ಲಿಭಾಯಿ ಹೇಳಿದರು.

ಗ್ರಾಮದಲ್ಲಿ ನೂತನವಾಗಿ ಆಯ್ಕೆಯಾದ ಈದ್ಗಾ ಕಮೀಟಿ ಸದಸ್ಯರುಗಳಿಗೆ ಸಮಸ್ತ ಮುಸ್ಲಿಂ ಸಮುದಾಯದ ಹಿರಿಯರಿಂದ ಮಮತಾಜ ಮಜೀದ್‌ನಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲಾವಾರು ವರ್ಷಗಳಿಂದ ನಡೆಯುತ್ತಿರುವ "ಅಲ್ ನಸರ್ ಬೈತುಲ್ ಮಾಲ್" ಜತೆಗೂಡಿ ನೂತನ ಈದ್ಗಾ ಕಮೀಟಿ ಸದಸ್ಯರು ಕೆಲಸ ಮಾಡಿರಿ, ನಾವು ನಿಮಗೆ ಯಾವಾಗಲೂ ಮಾರ್ಗದರ್ಶನ ಮಾಡುತ್ತೇವೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಜಹಾಂಗೀರಬಾಷಾ ಸಿರಸಗಿ ಅವರು, ಸಮಾಜದ ಏಳಿಗೆಗೆ ಯುವಶಕ್ತಿಯ ಅವಶ್ಯಕತೆಯಿದ್ದು, ಯುವಕರು ಹಳೆಯ ಬೇರು ಹೊಸ ಚಿಗರು, ಎಂಬಂತೆ ಹಿರಿಯರ ಮಾರ್ಗದರ್ಶನದಲ್ಲಿ ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದು ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಬೇಕಿದೆ ಎಂದರು,

ನೂತನವಾಗಿ ಈದ್ಗಾ ಕಮೀಟಿಯ ಅಧ್ಯಕ್ಷರಾದ ವಜೀರ ನಾಗಾವಿ, ಉಪಾಧ್ಯಕ್ಷರಾದ ಇಮ್ಮತೀಯಾಜ ಹೊರಪೇಟಿ, ಪ್ರಧಾನ ಕಾರ್ಯದರ್ಶಿ ಮೇಹಬೂಬ ಮೇಲಿನಮನಿ (ನಾಯ್ಕೋಡಿ), ಸಧ್ಯಸರುಗಳಾದ ಲಾಳೇಮಶಾಕ ನಾಯ್ಕೋಡಿ, ಸಮೀರ ಹೊಸಮನಿ, ಯೂನೂಸ್ (ಬಬಲು) ನಾಯ್ಕೋಡಿ, ಮಶಾಕಸಾಬ ವಲ್ಲಿಭಾಯಿ, ಸಮೀರ್ ಹೊಸಮನಿ, ದಾವಲ ನಾಯ್ಕೋಡಿ, ಸಲ್ಮಾನ್ ಖಾನ್ ಕುದರಗೋಂಡ, ಸಲೀಮ ಬಡೆಮ್ಮಗೋಳ, ಶಫೀಕ ಮನಿಯಾರ ಅವರನ್ನು ಹಿರಿಯ ಮುಖಂಡರು ಸನ್ಮಾನಿಸಿ ಗೌರವಿಸಿದರು.

ಹಿರಿಯರಾದ ಅಂಜುಮನ್ ಅಧ್ಯಕ್ಷರಾದ ಹುಸೇನಬಾಷಾ ದೋಡಮನಿ, ಖಾಜಾಮೀನ ವಲ್ಲಿಭಾಯಿ, ಜಹಾಂಗೀರಬಾಷಾ ಸಿರಸಗಿ, ಅಲ್ಲಾಬಕ್ಷ ನಾಯ್ಕೋಡಿ, ಮಹ್ಮದ ಉಸ್ತಾದ, ಮೇಹಮೂದ ಕೆಂಬಾವಿ, ನಬಿಲಾಲ ನಾಯ್ಕೋಡಿ, ಹುಸೇನ್ ನಾಯ್ಕೋಡಿ, ದಾವಲಸಾಬ ನಾಯ್ಕೋಡಿ, ಡಾ.ಹಸನ್ ನಾಗಾವಿ, ನಬಿಲಾಲ, ಶಾ, ನಾಯ್ಕೋಡಿ, ಇಸಾಕ ಪೀರಾಪೂರ, ರಜಾಕ ನಾಯ್ಕೋಡಿ ಮುಂತಾದವರು ಉಪಸ್ಥಿತರಿದ್ದರು.

# ಮುಳಸಾವಳಗಿಯಲ್ಲಿ ರಾಣಿ ಚೆನ್ನಮ್ಮ ಜಯಂತಿ ಆಚರಣೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಕಿತ್ತೂರು ಚೆನ್ನಮ್ಮನವರ ಜಯಂತಿಯನ್ನು ತಾಲ್ಲೂಕಿನ ಮುಳಸಾವಳಗಿ ಗ್ರಾಮದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಗ್ರಾಮದ ನಿವೃತ್ತ ಮುಖ್ಯಶಿಕ್ಷಕ ಬಿ.ಎಸ್.ಪೊಲೇಶಿ ಗ್ರಾಮದ ರಾಣಿ ಚೆನ್ನಮ್ಮ ವೃತ್ತದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಗ್ರಾಮದ ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಬಿರಾದಾರ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿಅಧ್ಯಕ್ಷ ಜಿ.ಪಿ.ಬಿರಾದಾರ ಯುವ ಮುಖಂಡರಾದ ಅರವಿಂದ ನಾಯ್ಕೋಡಿ ಹಾಗೂ ಜಾವೀದ ಮಕಾನದಾರ, ಗ್ರಾಮದ ಪಂಚಮಸಾಲಿ ಸಮಾಜದ ಅಧ್ಯಕ್ಷ ಸುರೇಶ ಉಕುಮನಾಳ ಶಿಕ್ಷಕ ಶ್ರೀಶೈಲ ರೋಡಗಿ ಮಾತನಾಡಿದರು.

ಗ್ರಾಮದ ಮಲಕು ಸುರಗಿಹಳ್ಳಿ, ತಿಪ್ಪಣ್ಣ ಮೂಲಿಮನಿ, ವಿರುಪಾಕ್ಷಿ ರೋಡಗಿ, ಹಣಮಂತ ಹಿರೂರ, ವಿಶ್ವನಾಥ ಸರಬಡಗಿ, ಅಪ್ಪಾಸಾಹೇಬ ಗಬ್ಬೂರ, ಭೀಮರಾಯ ಬಸರಕೋಡ, ಸಾಹೇಬಗೌಡ ನಾಗರಳ್ಳಿ, ಉಮೇಶ ರೋಡಗಿ, ಮನೋಹರ ಪೂಜಾರಿ, ದಾವುದ ಇನಾಮದಾರ, ಕಂಠೆಪ್ಪಗೌಡ ಬಿರಾದಾರ, ಚನ್ನಪ್ಪ ನಾಗರಳ್ಳಿ, ಅಣ್ಣಪ್ಪ ಮೆಳ್ಳಿಗೇರಿ, ಸಿದ್ದು ಹದರಿ, ಗುರುಸಂಗ ನಾಗರಳ್ಳಿ, ಅಶೋಕ ಹಚಡದ,ಸಚಿನ ಹೊನ್ನುಟಗಿ,ಸಿದ್ದಾರೂಢ ರೋಡಗಿ, ನಾಗೇಶ ಸರಬಡಗಿ, ಯಲ್ಲಾಲಿಂಗ ಪೂಜಾರಿ, ಕಾಸು ಹುಗ್ಗೇನವರ, ಉಮೇಶ ಮೂಲಿಮನಿ, ಕಿರಣ ಗಬ್ಬೂರ, ಮಲ್ಲು ಪೊಲೇಶಿ, ಶ್ರೀಶೈಲ ಮಠಪತಿ, ಬಸು ಕೊಟೀನ, ಸಾಹೇಬಗೌಡ ಬಂಥನಾಳ, ಸಿದ್ದಣ್ಣ ತೇಲಿ, ಸಾಯಬಣ್ಣ ಬೋಗಾರ, ಪರಮಾನಂದ ಬಿರಾದಾರ, ಪ್ರವೀಣ ಅಂಕಲಗಿ, ಸಿದ್ದಲಿಂಗ ಸಾತಿಹಾಳ, ಸಿದ್ದು ಬಡಿಗೇರ, ಗಂಗಾಧರ ನಾಯ್ಕೋಡಿ ಇದ್ದರು.

# ವಸತಿ ಯೋಜನೆ ಶೀಘ್ರ ಜಾರಿ; ಭೂಮಿ ಗುರುತಿಸಲು ಸೂಚನೆ

■ ಉದಯರಶ್ಮಿ ದಿನಪತ್ರಿಕೆ



ಆಲಮಟ್ಟಿ: ಸರ್ಕಾರದ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತು ಗ್ರಾಮೀಣ ಜನರಲ್ಲಿ ಜಾಗೃತಿ ಹೆಚ್ಚಲು ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ಮಾಹಿತಿ ನೀಡಬೇಕು ಎಂದು ಮುದ್ದೇಬಿಹಾಳ ಶಾಸಕ ಹಾಗೂ ಕರ್ನಾಟಕ ಸಾಬೂನು ಹಾಗೂ ಮಾರ್ಜಕ ನಿಯಮಿತ ಅಧ್ಯಕ್ಷ ಸಿ.ಎಸ್. ನಾಡಗೌಡ ಹೇಳಿದರು.

ಸಮೀಪದ ಯಲಗೂರ ಗ್ರಾಮದಲ್ಲಿ ಶನಿವಾರ ನಡೆದ 'ಪ್ರಜಾಸೇವಾ ಆಂದೋಲನ ಸಭೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮಗಳ ರಸ್ತೆ, ನೀರಾವರಿ ಸೇರಿದಂತೆ ಜನರ ಅಗತ್ಯಗಳಿಗೆ ಅನುಗುಣವಾಗಿ ಕ್ರಿಯಾಯೋಜನೆ ರೂಪಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕು. ಸರ್ಕಾರದಿಂದ ಕ್ಷೇತ್ರಕ್ಕೆ ಲಭ್ಯವಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಹಿಂದಿನ ಆಡಳಿತದಲ್ಲಿ ಹಣಕಾಸಿನ ಅನುಮೋದನೆ ಇಲ್ಲದೆ ಕೈಗೊಂಡ ಕಾಮಗಾರಿಗಳಿಂದ ಸಾವಿರಾರು ಕೋಟಿ ರೂ. ಬಾಕಿ ಉಳಿದಿತ್ತು. ಜನರ ಹಿತದೃಷ್ಟಿಯಿಂದ ಹಿಂದಿನ ಕಾಮಗಾರಿಗಳ ಜವಾಬ್ದಾರಿಯನ್ನೂ ಸರ್ಕಾರವೇ ನಿರ್ವಹಿಸುತ್ತಿದೆ ಎಂದರು.

ಪಂಚ ಗ್ಯಾರಂಟಿ ಯೋಜನೆಗಳಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ ?90 ಸಾವಿರದಿಂದ ?1 ಲಕ್ಷಕ್ಕೂ ಅಧಿಕ ಆರ್ಥಿಕ ನೆರವು ದೊರೆಯುತ್ತಿದೆ. ಮುಂದಿನ ದಿನಗಳಲ್ಲಿ ಅರ್ಹರಿಗೆ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರಿ ಜಮೀನು, ಗೋಮಾಳ ಹಾಗೂ ಪಡಾ ಭೂಮಿಯನ್ನು ಗುರುತಿಸಿ ವರದಿ ನೀಡುವಂತೆ ಪಿಡಿಒಗಳಿಗೆ ಸೂಚಿಸಲಾಗಿದೆ ಎಂದರು.

ಯಲಗೂರೇಶ್ವರ ಅನ್ನದಾಸೋಹ ಸಮಿತಿ ಹಾಗೂ ಪಿಕೆಪಿಎಸ್ ಅಧ್ಯಕ್ಷ ಶ್ಯಾಮ ಪಾತರದ, ಮುತ್ತಣ್ಣ ಮುತ್ತಣ್ಣವರ, ಶಾಸಕ ಸಿ.ಎಸ್. ನಾಡಗೌಡ ಅವರನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಎ.ಡಿ. ಅಮರವಾದಗಿ, ತಾ.ಪಂ.ಇಒ ವೆಂಕಟೇಶ ವಂದಾಲ, ಗ್ಯಾರಂಟಿ ಸಮಿತಿ ಅಧ್ಯಕ್ಷ ರಮೇಶ ಮಾಗಿ, ಬಿಇಒ ಎಂ. ಎಸ್. ಬಡದಾನಿ, ಯತೀಶ್ ಕೆ.ಎನ್. ಎಸ್.ಡಿ. ಕುಂಬಾರ, ಅಬೂಬಕರ ಬಾಗವಾನ, ಸಲೀಂ ಯಲಗೋಡ, ನಾನಾಗೌಡ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು. ವಿ

ವಿಧ ಇಲಾಖೆಗೆ ಸಂಬಂಧಿಸಿದ ಒಟ್ಟು 29 ಅರ್ಜಿಗಳನ್ನು ಸ್ವೀಕರಿಸಲಾಯಿತು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR